ಕನ್ನಡ ಮಾಧ್ಯಮದ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಪದಗಳ ಬಳಕೆ – ಒಂದು ಒಳನೋಟ

ಪ್ರಶಾಂತ ಸೊರಟೂರ

ಬನವಾಸಿ ಬಳಗ, ಬೆಂಗಳೂರು

ಹಿನ್ನೆಲೆ:

ತನ್ನ ಸುತ್ತಮುತ್ತ ನಡೆಯುತ್ತಿರುವ ಆಗುಹೋಗುಗಳ ಬಗ್ಗೆ ತಿಳಿದುಕೊಳ್ಳುವ ತವಕ ಮನುಷ್ಯರಲ್ಲಿ ಮೊದಲಿನಿಂದಲೂ ಇದೆ. ಎರಡು ಕಲ್ಲುಗಳನ್ನು ಉಜ್ಜಿ ಬೆಂಕಿಯ ಕಿಡಿಯನ್ನು ಉಂಟು ಮಾಡಿದಂತಹ ಅರಿವಿನ ಮೊದಲ ಹೆಜ್ಜೆಗಳು ಒಂದೆಡೆಯಾದರೆ, ತಾವು ಮಾಡಿದ ಸಲಕರಣೆಗಳಿಂದ ಬಾನಂಗಳದ ಆಳಕ್ಕೆ ತೂರುವ ಕಸುವನ್ನು ಇಂದು ಮನುಷ್ಯರು ಪಡೆದಿದ್ದಾರೆ. ಸಂಘ ಜೀವಿಯಾಗಿರುವ ಮನುಷ್ಯರು ಈ ಬಗೆಯಲ್ಲಿ ಬೇರೆಲ್ಲಾ ಜೀವಿಗಳಿಗಿಂತ ಹೆಚ್ಚಿನ ಜಾಣ್ಮೆಯನ್ನು ತೋರಿಸುತ್ತಿರುವುದಕ್ಕೆ ಮುಖ್ಯ ಕಾರಣವೆಂದರೆ ನಿರಂತರವಾಗಿ ಕಲಿಕೆಯಲ್ಲಿ ತೊಡಗಿರುವುದು. ತನ್ನ ಸುತ್ತಮುತ್ತ ಕಾಣುವುದನ್ನು ಒರೆಗೆಹಚ್ಚುವುದು, ಕಾಣದಿರುವುದನ್ನು ಊಹಿಸುವುದು, ತಿಳುವಳಿಕೆಯನ್ನು ತರ್ಕಬದ್ಧವಾಗಿ ತನ್ನದಾಗಿಸಿಕೊಳ್ಳುವುದರಲ್ಲಿ ಮನುಷ್ಯರು ಮೇಲುಗೈ ಸಾಧಿಸುತ್ತಾ ಬಂದಿದ್ದಾರೆ.

ಪಡೆದ ತಿಳುವಳಿಕೆಯನ್ನು ತನ್ನ ಸಮುದಾಯದಲ್ಲಿ ಹಂಚಲು ಇಲ್ಲವೇ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಅರಿವನ್ನು ಸಾಗಿಸುವ ಮಾಧ್ಯಮವಾಗಿ **ಕಲಿಕೆ** (Education) ಬಳಕೆಯಾಗುತ್ತಾ ಬಂದಿದೆ. ಮೊದಲಿಗೆ ಅಷ್ಟೇನೂ ವ್ಯವಸ್ಥಿತವಾಗಿರದಿದ್ದ ಕಲಿಕೆ, ಕಾಲ ಉರುಳಿದಂತೆ ಹಲವಾರು ಏರ್ಪಾಟುಗಳ ಮೂಲಕ ಸಮುದಾಯದಲ್ಲಿ ಎಲ್ಲರಿಗೂ ಅರಿವನ್ನು ಹಂಚುವ ವ್ಯವಸ್ಥೆಯಾಗಿ ಬದಲಾಯಿತು. ಶಾಲೆ, ಕಾಲೇಜುಗಳಂತಹ ಶಿಕ್ಷಣ ಸಂಸ್ಥೆಗಳು ಕಲಿಕೆಯ ಬಹು ಮುಖ್ಯ ಅಂಗಗಳಾಗಿ ಮೈದಾಳಿದವು. ಗೊತ್ತಿರದ ವಿಷಯವನ್ನು 'ಕಲಿಕೆಯ ಮೂಲಕ' ಗೊತ್ತುಮಾಡಿಕೊಳ್ಳುವುದು ವಾಡಿಕೆಯಾಗಿ ಬೆಳೆದುಬಂತು. ಇಂದಿನ ದಿನಗಳಲ್ಲಿ ಕಲಿಕೆಯು ಮನುಷ್ಯರ ಜೀವನದ ತುಂಬಾ ಮುಖ್ಯವಾದ ಅಂಗವಾಗಿದ್ದು, ಅದು ದುಡಿಮೆ, ಗಳಿಕೆ, ಏಳಿಗೆಗೆ ಒತ್ತಾಸೆಯಾಗಿ ಒಟ್ಟಾರೆ ಜೀವನವನ್ನು ಸಾಗಿಸಲು ಬೇಕಾದ ಅಗತ್ಯವಾದ ಸಾಧನವಾಗಿದೆ.

ಕಲಿಕೆಯ ಸರಿಯಾದ ವ್ಯವಸ್ಥೆ ಯಾವುದು? ಯಾವ ಬಗೆಯಲ್ಲಿ, ಯಾವ ಸಲಕರಣೆಗಳನ್ನು ಕಲಿಕೆಯಲ್ಲಿ ಬಳಸಬೇಕು? ಯಾವ ನುಡಿಯಲ್ಲಿ ಕಲಿಸಬೇಕು? ಮುಂತಾದ ಪ್ರಶ್ನೆಗಳು ಇಂದು ಕಲಿಕೆಯ ಸುತ್ತ ಹಬ್ಬಿಕೊಂಡಿವೆ. ಭಾರತದಲ್ಲಿ ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ಕಲಿಕೆಯ ಮಾಧ್ಯಮ ಯಾವುದಿರಬೇಕು ಎಂಬುದರ ಬಗ್ಗೆ ಇತ್ತೀಚಿನ ವರುಷಗಳಲ್ಲಿ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಜಗತ್ತಿನ ಹಲವಾರು ಮುಂಚೂಣಿ ಸಂಘ ಸಂಸ್ಥೆಗಳು ಮಕ್ಕಳ ಕಲಿಕೆ ಅವರ ತಾಯ್ನುಡಿಯಲ್ಲಿ ನಡೆಯುವುದು ಸರಿಯಾದ ನಡೆ ಎಂದು ಹೇಳಿದ್ದರೂ, ತಾಯ್ನುಡಿಯೇತರ ಮಾಧ್ಯಮದ ಬಗ್ಗೆ ಅದರಲ್ಲೂ ಇಂಗ್ಲೀಶ್ ಮಾಧ್ಯಮದ ಬಗ್ಗೆ ಒಲವು ಹೆಚ್ಚುತ್ತಿರುವುದು ಇತ್ತೀಚಿನ ವರುಷಗಳಲ್ಲಿ ಕಂಡುಬರುತ್ತಿದೆ.

ಜ್ಞಾನ-ವಿಜ್ಞಾನದ ಹೆಚ್ಚಿನ ವಿಷಯಗಳು ಭಾರತೀಯರಿಗೆ ಇಂದು ಇಂಗ್ಲೀಶ್ ಮೂಲಕ ದೊರೆಯುತ್ತಿರುವುದರಿಂದ ಮತ್ತು ಇದಕ್ಕೆ ದುಡಿಮೆ, ಗಳಿಕೆಯೂ ಅಂಟಿಕೊಂಡಿರುವುದರಿಂದ ಇಂಗ್ಲೀಶ್ ಮಾಧ್ಯಮದತ್ತ ಜನರು ವಾಲುತ್ತಿರುವುದಕ್ಕೆ ಮೇಲ್ನೋಟದ ಕಾರಣಗಳಾದರೆ, ಕನ್ನಡವೂ ಸೇರಿದಂತೆ ಭಾರತದ ಇತರ ನುಡಿಗಳನ್ನು ಜ್ಞಾನ-ವಿಜ್ಞಾನದ ಕವಲಿಗೆ ಸಜ್ಜುಗೊಳಿಸದಿರುವುದು, ತಾಯ್ನುಡಿಯಲ್ಲಿ ಕಲಿಕೆಯ ಮಹತ್ವವನ್ನು, ಒಳಿತನ್ನು ಸಾಮಾನ್ಯ ಜನರಿಗೆ ಸರಿಯಾಗಿ ತಿಳಿಸದಿರುವುದು, ಶಾಲೆಗಳ ಸೌಕರ್ಯಗಳು, ಪಠ್ಯಪುಸ್ತಕಗಳೂ ಸೇರಿದಂತೆ ಒಟ್ಟಾರೆಯಾಗಿ ತಾಯ್ನುಡಿಯಲ್ಲಿನ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸದಿರುವುದು, ತಾಯ್ನುಡಿಯಲ್ಲಿನ ಕಲಿಕೆ ಭಾರತದಲ್ಲಿ ಇಂದು ಸೊರಗುತ್ತಿರುವುದಕ್ಕೆ ಮುಖ್ಯ ಕಾರಣಗಳು ಎನ್ನಬಹುದು.

ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯಾದ **ಯುನೆಸ್ಕೋ** (UNESCO), ಮಕ್ಕಳ ತಾಯ್ನುಡಿಯು ಅವರ ಕಲಿಕೆಯ ಮಾಧ್ಯಮವಾಗುವುದು ತುಂಬಾ ಮುಖ್ಯ. ಇದು ಕಲಿಕೆಯ ಒಟ್ಟಾರೆ ಗುಣಮಟ್ಟವನ್ನು ತೀರ್ಮಾನಿಸುತ್ತದೆ ಎಂದು ಗುರುತಿಸಿದೆ. ಆದರೂ ಮೇಲೆ ತಿಳಿಸಿದಂತೆ ಬೇರೆ ಬೇರೆ ಕಾರಣಗಳಿಂದಾಗಿ ಮಕ್ಕಳ ಕಲಿಕೆಯ ಮಾಧ್ಯಮದ ಪ್ರಶ್ನೆ ಇನ್ನೂ ಚರ್ಚೆಯಾಗುತ್ತಲೇ ಇದೆ.

ಕರ್ನಾಟಕದಲ್ಲಿ ಕಲಿಕೆಯ ಮಾಧ್ಯಮ ಇಂಗ್ಲೀಶ್ ಮಾಧ್ಯಮದತ್ತ ವಾಲುತ್ತಿರುವುದು ಇತ್ತೀಚಿನ ವರುಷಗಳಲ್ಲಿ ಕಂಡುಬಂದರೂ, ಕನ್ನಡ ಮಾಧ್ಯಮದಲ್ಲಿ ಓದುವ ಮಕ್ಕಳ ಸಂಖ್ಯೆ ಇಂದಿಗೂ ಕೂಡಾ ಹೆಚ್ಚಿದೆ. ಈ ವಿಷಯವನ್ನು ಕೆಳಗಿನ ಅಂಕಿ ಅಂಶಗಳಿಂದ ತಿಳಿದುಕೊಳ್ಳಬಹುದು.

1 ರಿಂದ 10 ನೇ ತರಗತಿ ವರೆಗಿನ ಮಾಧ್ಯಮವಾರು ಅಂಕಿ ಅಂಶಗಳು:

ಕನ್ನಡ		ಇಂಗ್ಲೀಶ್		ಉರ್ದು		ಮರಾಠಿ		ಇತರೆ		ಒಟ್ಟು	
ಮಕ್ಕಳು	%	ಮಕ್ಕಳು	%	ಮಕ್ಕಳು	%	ಮಕ್ಕಳು	%	ಮಕ್ಕಳು	%	ಮಕ್ಕಳು	%
7209662	71.3	2257021	22.3	479166	4.7	139976	1.4	24001	0.2	10109826	100.0



*(**ಮಾಹಿತಿಯ ಮೂಲ:** ಕರ್ನಾಟಕ ಶಿಕ್ಷಣ ಇಲಾಖೆಯ ವರದಿ 2014-15, http://www.schooleducation.kar.nic.in/html/dise_reports.html)*

ಕರ್ನಾಟಕದಲ್ಲಿ 1 ರಿಂದ 10 ನೇ ತರಗತಿಯ ಸುಮಾರು 71% ಮಕ್ಕಳು ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿದ್ದಾರೆ ಹಾಗಾಗಿ ಕರ್ನಾಟಕದ 10 ನೇ ತರಗತಿವರೆಗಿನ ಕಲಿಕೆಯ ಗುಣಮಟ್ಟವನ್ನು ವಿಶ್ಲೇಷಿಸುವಾಗ ಕನ್ನಡ ಮಾಧ್ಯಮದ ಗುಣಮಟ್ಟವನ್ನು ಒರೆಗೆಹಚ್ಚುವುದು ತುಂಬಾ ಮುಖ್ಯವಾಗುತ್ತದೆ.

ಕಲಿಕೆಯ ಗುಣಮಟ್ಟದಲ್ಲಿ ಪಠ್ಯಪುಸ್ತಕಗಳ ಪಾತ್ರ ತುಂಬಾ ದೊಡ್ಡದು. ಯಾವೆಲ್ಲ ವಿಷಯಗಳನ್ನು ಪಠ್ಯದಲ್ಲಿ ಸೇರಿಸಲಾಗಿದೆ, ವಿಷಯಗಳ ಹರಿವು, ವಿವರಿಸುವ ಬಗೆ, ಪದಗಳ, ವಾಕ್ಯಗಳ ರಚನೆ, ಚಿತ್ರಗಳ ಗುಣಮಟ್ಟ ಹೇಗಿದೆ ಮುಂತಾದವುಗಳು ಪಠ್ಯಪುಸ್ತಕಗಳ ಗುಣಮಟ್ಟವನ್ನು ಅಳೆಯುವ ಅಳತೆಗೋಲುಗಳಾಗಿವೆ.

ಪಠ್ಯಪುಸ್ತಕಗಳು ಅದರಲ್ಲೂ ವಿಜ್ಞಾನದಂತಹ ವಿಷಯಗಳ ಪಠ್ಯಪುಸ್ತಕಗಳಲ್ಲಿ ಬಳಸಲಾದ ಪದಗಳ ಗುಣಮಟ್ಟ ಮಕ್ಕಳ ಕಲಿಕೆಯ ಒಟ್ಟಾರೆ ಗುಣಮಟ್ಟದ ಮೇಲೆ ತುಂಬಾ ಪರಿಣಾಮವನ್ನು ಬೀರುತ್ತದೆ. ವಿಷಯವೊಂದರ ಸುತ್ತ ಹರಡಿರುವ ಅರಿವನ್ನು ಮಕ್ಕಳಿಗೆ ತಲುಪಿಸುವಲ್ಲಿ ಪದಗಳು ತುಂಬಾ ಪ್ರಮುಖ ಪಾತ್ರ ವಹಿಸುತ್ತವೆ. ಗಿಡಗಳ ಆಹಾರ ತಯಾರಿಕೆಯಲ್ಲಿ ಭಾಗವಹಿಸುವ ಅದರ ಭಾಗಗಳಾಗಲಿ ಇಲ್ಲವೇ ಮನುಷ್ಯರ ಮೈ ಭಾಗಗಳು, ಅವುಗಳ ಕೆಲಸ ಮಾಡುವ ಬಗೆಯನ್ನು ತಿಳಿಸುವುದೇ ಆಗಲಿ, ವಿಷಯವೊಂದನ್ನು ತಿಳಿಸಲು ಪಾರಿಭಾಷಿಕ ಪದಗಳು (scientific and technical words) ಅಡಿಪಾಯದ ಕೆಲಸವನ್ನು ಮಾಡುತ್ತವೆ.

ಮಕ್ಕಳು ಬೆಳೆಯುವ ಪರಿಸರದಲ್ಲಿ ಈಗಾಗಲೇ ಕೇಳಿ ಕಲಿತಿರುವ ಇಲ್ಲವೇ ಅವರ ಆಡುನುಡಿಗೆ ಹತ್ತಿರವಾದ ಪದಗಳು ಪಠ್ಯಪುಸ್ತಕಗಳಲ್ಲೂ ಕಂಡುಬಂದರೆ ಮಕ್ಕಳ ಕಲಿಕೆಯು ಸುಲಭವಾಗಬಲ್ಲದು. ಉದಾಹರಣೆಗೆ, 'ಬೆಳಕು' ಅನ್ನುವ ಪದವನ್ನು ಹೆಚ್ಚಿನ ಮಕ್ಕಳು ತಮ್ಮ ಪರಿಸರದ ಮೂಲಕ ಆಗಲೇ ಕಲಿತಿರುತ್ತಾರೆ, ಅದೇ ಪದ ಪಠ್ಯಪುಸ್ತಕಗಳಲ್ಲೂ ಕಂಡುಬಂದರೆ, ಬೆಳಕಿನ ಗುಣಗಳು, ಅದರ ಬಳಕೆ, ಅದರ ಮೂಲಗಳು ಮುಂತಾದ ಬೆಳಕಿನ ಬಗೆಗಿನ ಇತರ ವಿಷಯಗಳನ್ನು ತಿಳಿದುಕೊಳ್ಳುವುದು ಮಕ್ಕಳಿಗೆ ಸುಲಭವಾಗುತ್ತದೆ. ಅದೇ 'ಬೆಳಕು' ಪದದ ಬದಲು 'ಫೋಟೋ' (photo) ಅಂತಾನೋ ಇಲ್ಲವೇ 'ದ್ಯುತಿ' ಅಂತಾನೋ ಪಠ್ಯಪುಸ್ತಕಗಳಲ್ಲಿ ಬಳಸಿದರೆ, ಮಕ್ಕಳಿಗೆ ಪದಗಳು ತೊಡಕೆನಿಸಿ ವಿಷಯವನ್ನು ಅರಿಯುವ ಬದಲು ಪದಗಳನ್ನು ಕಂಠಪಾಠ ಮಾಡುವುದರಲ್ಲೇ ತಮ್ಮ ಹೆಚ್ಚಿನ ಸಮಯವನ್ನು ಅವರು ಕಳೆಯಬೇಕಾಗುತ್ತದೆ.

ತಾಯ್ನುಡಿಯು, ಮಕ್ಕಳು ಬೆಳೆಯುವ ಪರಿಸರದಲ್ಲಿ, ಅವರ ದೈನಂದಿನ ಚಟುವಟಿಕೆಗಳಲ್ಲಿ ಆಗಲೇ ಹಾಸುಹೊಕ್ಕಾಗಿರುತ್ತದೆ ಹಾಗಾಗಿ ಮಕ್ಕಳು ತಮಗೆ ಗೊತ್ತಿರುವ ನುಡಿಯ (ಪದಗಳು, ವಾಕ್ಯಗಳು) ಮೂಲಕ ಗೊತ್ತಿರದ ಕಲಿಕೆಯ ವಿಷಯವನ್ನು ಅರಿತುಕೊಳ್ಳುವುದು ಸುಲಭವಾಗುತ್ತದೆ. ಹಾಗಾಗಿ ಪಠ್ಯಪುಸ್ತಕಗಳು ಆದಷ್ಟೂ ಮಕ್ಕಳ ಪರಿಸರಕ್ಕೆ, ಅವರಾಡುವ ನುಡಿಗೆ ಹತ್ತಿರವಾಗಿರುವುದು ಮುಖ್ಯವಾಗಿದೆ. ತಾಯ್ನುಡಿಯಲ್ಲಿ ಕಲಿಕೆ ಒಳ್ಳೆಯದು ಎಂದು ಜಾಗತಿಕ ಸಂಘ ಸಂಸ್ಥೆಗಳು ಹೇಳಲು ತಳಹದಿಯೂ ಇದೇ ಆಗಿದೆ.

ಈ ಹಿನ್ನೆಲೆಯಲ್ಲಿ ಕನ್ನಡ ಮಾಧ್ಯಮದ ಇಂದಿನ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಬಳಸಲಾಗಿರುವ ಪಾರಿಭಾಷಿಕ (scientific and technical) ಪದಗಳ ಬಗೆಯನ್ನು ಒರೆಗೆಹಚ್ಚುವುದು ಈ ವರದಿಯ ಮುಖ್ಯ ಉದ್ದೇಶವಾಗಿದೆ. ಪದಗಳಲ್ಲಿ ಕೊರತೆ ಕಂಡುಬಂದಲ್ಲಿ ಅವುಗಳಿಗೆ ಸಾಟಿಯಾಗಿ ಬಳಸಬಹುದಾದ ಪದಗಳನ್ನು ಮುಂದಿಡುವುದೂ ಈ ಅಧ್ಯಯನದ ನಡೆಯಲ್ಲೊಂದಾಗಿದೆ.

ಅಧ್ಯಯನದ ಬಗೆ:

2014-15 ನೇ ಸಾಲಿನ, 5, 8 ಮತ್ತು 10 ನೇ ತರಗತಿಗಳ ರಾಜ್ಯ ಪಠ್ಯಕ್ರಮದ ಕನ್ನಡ ಮಾಧ್ಯಮದ ವಿಜ್ಞಾನ ಪಠ್ಯಪುಸ್ತಕಗಳನ್ನು ಈ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಪದಗಳ ಹಿನ್ನೆಲೆ, ಮೂಲವನ್ನು ತಿಳಿದುಕೊಳ್ಳುವುದು ಅಗತ್ಯವೆನಿಸಿದಾಗ ಇಂಗ್ಲೀಶ್ ಮಾಧ್ಯಮದ ಪಠ್ಯಪುಸ್ತಕಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನದ ಮೊದಲ ಹಂತವಾಗಿ 5 ರಿಂದ 10 ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕಗಳ ಮರುನೋಟ ಮಾಡಲಾಯಿತು. ಈ ಮರುನೋಟದ ಆಧಾರದ ಮೇಲೆ 5, 8 ಮತ್ತು 10 ನೇ ತರಗತಿಯಲ್ಲಿರುವ ಪದಗಳನ್ನು ಒರೆಗೆಹಚ್ಚಿದರೆ 5 ರಿಂದ 10 ನೇ ತರಗತಿ ವರೆಗಿನ ಒಟ್ಟಾರೆ ನಡೆಯನ್ನು ಅರಿಯಬಹುದು ಎಂದು ತೀರ್ಮಾನಿಸಲಾಯಿತು. ಇದರಂತೆ 5, 8 ಮತ್ತು 10 ನೇ ತರಗತಿಯ ವಿಜ್ಞಾನ ಪಠ್ಯಪುಸ್ತಕದ ಪಾಠಗಳಲ್ಲಿ ಬಳಸಿರುವ ಪಾರಿಭಾಷಿಕ ಪದಗಳನ್ನು ಕೆಳಗಿನ ಉದಾಹರಣೆಯಲ್ಲಿ ತೋರಿಸಿರುವಂತೆ ಪಟ್ಟಿ ಮಾಡಲಾಯಿತು.

ಕ್ರ. ಸಂ	ತರಗತಿ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು
1	5	1	ಚಲನೆ	ನೇರ ಚಲನೆ	Linear Motion
2	5	1	ಚಲನೆ	ವಕ್ರ ಚಲನೆ	Curvilinear Motion
3	5	1	ಚಲನೆ	ಭ್ರಮಣ ಚಲನೆ	Rotatory Motion

ಈ ಬಗೆಯಲ್ಲಿ ಪಟ್ಟಿ ಮಾಡಿದಾಗ 827 ಪಾರಿಭಾಷಿಕ ಪದಗಳು ಪಟ್ಟಿಯಲ್ಲಿ ಸೇರಿಕೊಂಡವು.

ಅಧ್ಯಯನದ ಮುಂದಿನ ಹಂತವಾಗಿ ಪಟ್ಟಿ ಮಾಡಲಾದ ಪದಗಳನ್ನು ಕೆಳಗಿನಂತೆ ವಿಂಗಡಿಸಲಾಯಿತು.

ವಿಂಗಡಣೆಯ ಹಿನ್ನೆಲೆ:

ಕನ್ನಡ ನುಡಿಯ ಬಗ್ಗೆ ನಡೆದಿರುವ ಭಾಷಾವಿಜ್ಞಾನದ ಅಧ್ಯಯನಗಳು ಆಡುನುಡಿ ಮತ್ತು ಬರಹದ ನುಡಿ ಎಂಬ ಎರಡು ಬಗೆಗಳನ್ನು ಗುರುತಿಸಿದ್ದು, ಆಡುನುಡಿಯಲ್ಲಿ ಕನ್ನಡದ ಬೇರು ಪದಗಳು ಹೆಚ್ಚಿರುವುದು ಮತ್ತು ಬರಹದ ನುಡಿಯಲ್ಲಿ ಬೇರೆ ನುಡಿಗಳಿಂದ ಎರವಲು ಪಡೆದ ಪದಗಳು ಹೆಚ್ಚಿರುವುದನ್ನು ಕಂಡುಕೊಂಡಿವೆ. ಈ ವರದಿಯ ಮೊದಲ ಭಾಗದಲ್ಲಿ ತಿಳಿಸಿರುವಂತೆ ಮಕ್ಕಳ ಪರಿಸರದಲ್ಲಿರುವ ಅವರಾಡುವ ನುಡಿಯ ಪದಗಳು ಪರಿಣಾಮಕಾರಿಯಾದ ಕಲಿಕೆಯಲ್ಲಿ ತುಂಬಾ ಮುಖ್ಯವಾದುದರಿಂದ ಮತ್ತು ಭಾಷಾವಿಜ್ಞಾನದ ಅಧ್ಯಯನಗಳು ಕಂಡುಕೊಂಡ ವಿಷಯಗಳನ್ನು ಆಧರಿಸಿ ಮೇಲೆ ಚಿತ್ರದಲ್ಲಿ ತೋರಿಸಿರುವ ಬಗೆಯಲ್ಲಿ ಪದಗಳ ವಿಂಗಡಣೆ ಮಾಡುವುದು ಸೂಕ್ತವೆನಿಸಿತು.

ತಿಳಿದ ಪದಗಳು: ಮಕ್ಕಳು ಶಾಲೆಯಂತಹ ಕಲಿಕೆಯ ವ್ಯವಸ್ಥೆಯೊಂದನ್ನು ಸೇರುವ ಮೊದಲೇ ಇಲ್ಲವೇ ಅದರ ಜತೆ ಜತೆಗೆ ತಮ್ಮ ಮನೆ, ಸುತ್ತಮುತ್ತಲಿನ ಪರಿಸರದಿಂದ ಹಲವಾರು ಪದಗಳನ್ನು ಕಲಿತಿರುತ್ತಾರೆ. ಗಾಳಿ, ನೀರು, ಬೆಂಕಿ, ಬೆಳಕಿನಂತಹ ಪದಗಳಾಗಲಿ, ತೇಲುವುದು, ಹಾರುವುದು, ಏರುವುದು ಮುಂತಾದ ಕೆಲಸಗಳನ್ನು ಸೂಚಿಸುವ ಪದಗಳೇ ಆಗಲಿ, ಅವರ ಅರಿವಿನಲ್ಲಿ ಆಗಲೇ ಸಾಕಷ್ಟು ಪದಗಳು ಮನೆಮಾಡಿರುತ್ತವೆ. ಸಾಮಾನ್ಯವಾಗಿ ಬಳಕೆಯಾಗುವ ಇಲ್ಲವೇ ಸ್ವಲ್ಪ ಹಿನ್ನೆಲೆಯನ್ನು ತಿಳಿಸಿಕೊಟ್ಟರೆ ಬೇಗನೇ ತಿಳಿಯಬಲ್ಲ ಪದಗಳನ್ನು 'ತಿಳಿದ ಪದಗಳು' ಇಲ್ಲವೇ 'ತಿಳಿಯುವ ಪದಗಳು' ಎನ್ನಬಹುದು.

ತಿಳಿದ ಪದಗಳಲ್ಲಿ ಮೇಲೆ ತಿಳಿಸಿರುವಂತೆ ಕನ್ನಡದ ಪರಿಸರದಲ್ಲಿ ಅದರ ಬೇರು ಪದಗಳು ಹೆಚ್ಚಾಗಿವೆ. ಅದರ ಜತೆಗೆ ಬೇರೆ ನುಡಿಯ ಹಲವಾರು ಪದಗಳೂ ಸೇರಿಕೊಂಡಿವೆ. ಉದಾ: ಹರಿವು, ತೂಕ, ಬಿಸಿ, ಉರಿತ, ಗಟ್ಟಿತನ, ಹರಡುವಿಕೆ ಮುಂತಾದ ಕನ್ನಡದ ಬೇರು ಪದಗಳು ಮಕ್ಕಳ ಪರಿಸರದಲ್ಲಿ ಹಾಸುಹೊಕ್ಕಾಗಿದ್ದರೆ, ಸೂರ್ಯ, ಭೂಮಿ, ಗಾಡಿ, ಕಾರು, ಬಸ್ಸು ಮುಂತಾದ ಬೇರೆ ನುಡಿಯ ಪದಗಳು ಅವರಿಗೆ ಗೊತ್ತಿರುವ ಪದಗಳಾಗಿರುತ್ತವೆ.

ಪಠ್ಯಪುಸ್ತಕಗಳಲ್ಲಿ ಈ ತರಹದ ತಿಳಿದ ಪದಗಳ ಪ್ರಮಾಣವನ್ನು ಎಣಿಕೆ ಮಾಡಲು ಮೇಲೆ ತಿಳಿಸಿರುವಂತೆ ತಿಳಿದ ಪದಗಳನ್ನು ವಿಂಗಡೆಯ ಭಾಗವಾಗಿ ಆಯ್ದುಕೊಳ್ಳಲಾಯಿತು. ತಿಳಿಯುವ ಪದಗಳಲ್ಲಿ ಕನ್ನಡದ ಬೇರು ಪದಗಳು ಎಷ್ಟಿವೆ ಮತ್ತು ಬೇರೆ ನುಡಿಯಿಂದ ಬಂದ ಪದಗಳು ಎಷ್ಟಿವೆ ಎಂದು ಅರಿಯಲು, 'ತಿಳಿದ ಕನ್ನಡ ಪದಗಳು' ಮತ್ತು 'ತಿಳಿದ ಬೇರೆ ನುಡಿಯ ಪದಗಳು' ಎಂಬ ಒಳಗುಂಪುಗಳನ್ನು ವಿಂಗಡಣೆಯಲ್ಲಿ ಸೇರಿಸಲಾಯಿತು.

ಇಲ್ಲಿ ಇನ್ನೊಂದು ಗಮನಿಸಬೇಕಾದ ವಿಷಯವೆಂದರೆ ತಿಳಿದ ಪದಗಳೆಂದರೆ ಆಗಲೇ ಗೊತ್ತಿರುವ ಪದಗಳಾಗಿರಬಹುದು ಇಲ್ಲವೇ ಗೊತ್ತಿರುವ ಪದಗಳಿಗೆ ಹತ್ತಿರವಾಗಿರುವ, ಸ್ವಲ್ಪ ಹಿನ್ನೆಲೆಯನ್ನು ಹೇಳಿಕೊಟ್ಟರೆ ಬೇಗನೇ ತಿಳಿದುಕೊಳ್ಳಬಹುದಾದ ಪದಗಳಾಗಿರಬಹುದು. ಉದಾಹರಣೆಗೆ, 'ನಡುವೆ' ಅನ್ನುವ ಪದ ಸಾಮಾನ್ಯವಾಗಿ ಗೊತ್ತಿರುವ ಪದ, ವಿಜ್ಞಾನದ ಕೆಲವು ವಿಷಯಗಳನ್ನು ತಿಳಿಸುವಾಗ ಈ ಬೇರು ಪದವನ್ನು ಬಳಸಿ 'ನಡುವಣ' ಅನ್ನುವ ಇನ್ನೊಂದು ಪದವನ್ನು ಉಂಟು ಮಾಡಬಹುದು. ಈ ಪದವು ಕೂಡ 'ತಿಳಿಯುವ ಪದ' ಗುಂಪಿಗೆ ಸೇರಿಸಬೇಕಾಗುತ್ತದೆ. ಅದೇ ಈ ಪದಕ್ಕೆ 'ನ್ಯೂಕ್ಲಿಯಸ್' ಅಂತಾ ಬಳಸಿದರೆ ಅದು ಅವರ ತಿಳುವಳಿಕೆಗೆ ದೂರವಿರುವ 'ತಿಳಿಯದ ಪದದ' ಗುಂಪಿಗೆ ಸೇರಿಸಬೇಕಾಗುತ್ತದೆ.

ತಿಳಿಯದ ಪದಗಳು:

ಮಕ್ಕಳ ಪರಿಸರದಿಂದ ದೂರವಿರುವ, ಅವುಗಳನ್ನು ಕಲಿಯಲು ಹೆಚ್ಚಿನ ಶ್ರಮವಹಿಸಬೇಕಾಗುವ ಪದಗಳನ್ನು 'ತಿಳಿಯದ ಪದಗಳು' ಗುಂಪಿಗೆ ಸೇರಿಸಲಾಯಿತು. ಉದಾ: ಪ್ರಚ್ಛನ್ನ, ಅಷ್ಟಕ, ಅಪರ್ಕ್ಯುಲಮ್, ಕರೋನಾ, ನಿಶೇಚನ, ಕ್ಯುಟಿಕಲ್ ಮುಂತಾದ ಪದಗಳು ಮಕ್ಕಳಿಗೆ ಸುಲಭವಾಗಿ ತಿಳಿಯುವುದಿಲ್ಲ, ಅವುಗಳನ್ನು ಕಲಿಯಲು ಮಕ್ಕಳು ಹೆಚ್ಚಿನ ಶ್ರಮವಹಿಸಬೇಕಾಗುತ್ತದೆ. ಇಂತಹ ಪದಗಳ ಪ್ರಮಾಣವನ್ನು ಲೆಕ್ಕಹಾಕಲು ವಿಂಗಡಣೆಯಲ್ಲಿ 'ತಿಳಿಯದ ಪದಗಳು' ಎಂಬ ಬಗೆಯನ್ನು ಸೇರಿಸಲಾಯಿತು.

ತಿಳಿಯದ ಪದಗಳಲ್ಲಿ ಕನ್ನಡದ ಬೇರು ಪದಗಳಿಂದ ಉಂಟಾದ ಪದಗಳು ಎಷ್ಟಿವೆ ಮತ್ತು ಬೇರೆ ನುಡಿಯಿಂದ ಬಂದ ಪದಗಳು ಎಷ್ಟಿವೆ ಎಂದು ಅರಿಯಲು 'ತಿಳಿಯದ ಕನ್ನಡ ಪದಗಳು' ಮತ್ತು 'ತಿಳಿಯದ ಬೇರೆ ನುಡಿಯ ಪದಗಳು' ಎಂಬ ಒಳಗುಂಪುಗಳನ್ನು ಈ ವಿಂಗಡಣೆಯಲ್ಲಿ ಸೇರಿಸಲಾಯಿತು.

ವಿಂಗಡಣೆಯ ಫಲಿತಾಂಶಗಳು:

ಮೇಲೆ ತಿಳಿಸಿರುವ ಬಗೆಯಲ್ಲಿ ಪಟ್ಟಿ ಮಾಡಿದ 827 ಪಾರಿಭಾಷಿಕ ಪದಗಳನ್ನು ವಿಂಗಡಿಸಿದಾಗ ಕೆಳಗಿನ ಅಂಕಿ ಅಂಶಗಳು ದೊರೆತವು.



ಪಠ್ಯಪುಸ್ತಕಗಳಲ್ಲಿರುವ ಪಾರಿಭಾಷಿಕ ಪದಗಳಲ್ಲಿ ಹೆಚ್ಚಿನವು ಮಕ್ಕಳ ಪರಿಸರ ನುಡಿಯಿಂದ ದೂರವಿರುವ ಪದಗಳೆಂದು ಈ ವಿಂಗಡಣೆಯಲ್ಲಿ ಕಂಡುಬಂದಿತು. ವಿಂಗಡಣೆಗೆ ಒಳಪಡಿಸಿದ 827 ಪದಗಳಲ್ಲಿ 552 ಪದಗಳು ಅಂದರೆ ಸುಮಾರು 67% ಪದಗಳು ತಿಳಿಯದ ಪದಗಳ ಗುಂಪಿಗೆ ಸೇರಿದ್ದಾಗಿದ್ದವು. ಇದರಲ್ಲಿ ಹೆಚ್ಚಿನವು ಅಂದರೆ ಸುಮಾರು 65% ಪದಗಳು ಬೇರೆ ನುಡಿ ಮೂಲದಿಂದ ಬಂದ ಪದಗಳಾಗಿದ್ದವು.

ಮಕ್ಕಳ ಪರಿಸರದ ನುಡಿಯಿಂದ ದೂರವಿರುವ, ಅರಿಯಲು ಕಷ್ಟವೆನಿಸುವ ಪದಗಳ ಕೆಲವು ಉದಾಹರಣೆಗಳನ್ನು ಕೆಳಗಿನ ಪಟ್ಟಿಯಲ್ಲಿ ನೋಡಬಹುದು. (ಈ ವರದಿಯ ಕೊನೆಯ ಭಾಗದಲ್ಲಿ ಪದಗಳ ಒಟ್ಟಾರೆ ಪಟ್ಟಿಯನ್ನು ನೀಡಲಾಗಿದೆ.)

ತಿಳಿಯಲು ಕಷ್ಟವೆನಿಸುವ ಪದಗಳು
ಏರೋಸಾಲ್
ವಾಯುಕೂಪಿಕೆ
ನೀರ್ಲವಣೀಕರಣ
ಗೃಹತ್ಯಾಜ್ಯ
ಉತ್ಪರಿವರ್ತನೆ
ಆರೋಹಣ
ಭಿದುರತ್ವ
ಕುಟ್ಯ
ತನ್ಯ
ಬಹಿರುಷ್ಣಕ
ಅಂತರುಷ್ಣಕ
ಅದಹ್ಯತೆ
ಹೃತ್ಕರ್ಣ
ಹೃತ್ಕುಕ್ಷಿ
ಅಂಡಜ
ಯುಗ್ಮಜ
ಅಕಶೇರುಕ
ಪ್ರಚ್ಛನ್ನ ಶಕ್ತಿ

ಮೇಲೆ ಉದಾಹರಣೆ ನೀಡಿದ ಪಾರಿಭಾಷಿಕ ಪದಗಳನ್ನು ಅರಿಯುವುದು ಮಕ್ಕಳಿಗೆ ತುಂಬಾ ಕಷ್ಟ ಅನ್ನುವುದನ್ನು ಗಮನಿಸಬಹುದು. 'ಹೃದಯ' ಅನ್ನುವಂತಹ ಪದ ಮಕ್ಕಳಿಗೆ ಪರಿಚಯವಿದ್ದರೂ, ಅದರಿಂದ ಉಂಟು ಮಾಡಿದ ಹೃತ್ಕರ್ಣ, ಹೃತ್ಕುಕ್ಷಿ ಪದಗಳು ಅವರ ಅರಿವಿಗೆ ಎಟುಕುವುದು ಕಷ್ಟವೆನ್ನಬಹುದು. ಈ ಪದಗಳನ್ನು ಬಿಡಿಸಿ ಹೇಳಿದರೂ ಕರ್ಣ, ಕುಕ್ಷಿ ಅಂದರೇನು ಅನ್ನುವುದು ಮಕ್ಕಳಿಗೆ ಸರಾಗವಾಗಿ ತಿಳಿಯಲಾರದು.

ಸಾಟಿಯಾದ ಪದಗಳು:

ಕಷ್ಟವೆನಿಸುವ ಪಾರಿಭಾಷಿಕ ಪದಗಳಿಗೆ ಸಾಟಿಯಾಗಿ ಸುಲಭವೆನಿಸಬಹುದಾದ ಪದಗಳನ್ನು ಮುಂದಿಡುವುದೂ ಈ ಅಧ್ಯಯನದ ಗುರಿಯಾಗಿದ್ದರಿಂದ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹಲವು ವರುಷಗಳಿಂದ ದುಡಿಯುತ್ತಿರುವ ಮತ್ತು ಪದಕಟ್ಟಣೆಯಲ್ಲಿ ಅನುಭವವಿರುವ ತಂಡವೊಂದನ್ನು ರಚಿಸಲಾಯಿತು. (ಈ ಕೆಲಸದಲ್ಲಿ ಪಾಲ್ಗೊಂಡವರ ವಿವರಗಳನ್ನು ಈ ವರದಿಯ ಕೊನೆಯಲ್ಲಿ ಕೊಡಲಾಗಿದೆ).

ಪಠ್ಯಪುಸ್ತಕಗಳಲ್ಲಿ ಬಳಸಲಾಗಿರುವ ಪದಗಳ ಹಿನ್ನೆಲೆ, ಇಂಗ್ಲೀಶ್ ಮಾಧ್ಯಮದ ಪುಸ್ತಕಗಳಲ್ಲಿ ಬಳಸಲಾದ ಪದಗಳು, ಪದಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ಓದುವಿಕೆಯ ಮೂಲಕ ಸಾಟಿ ಪದಗಳನ್ನು ಪಟ್ಟಿಮಾಡುವ ಇಲ್ಲವೇ ಕಟ್ಟುವ ಕೆಲಸವನ್ನು ಮಾಡಲಾಯಿತು. ಮೇಲೆ ನೀಡಿದ ಉದಾಹರಣೆಯ ಪಟ್ಟಿಗೆ ನೀಡಲಾದ ಸಾಟಿ ಪದಗಳನ್ನು ಕೆಳಗೆ ನೋಡಬಹುದು. (ಈ ವರದಿಯ ಕೊನೆಯಲ್ಲಿ ಒಟ್ಟಾರೆ ಪಟ್ಟಿಯನ್ನು ನೀಡಲಾಗಿದೆ.)

ಸುಲಭವಾಗಿ ತಿಳಿಯದ ಪದಗಳು	ಇಂಗ್ಲೀಶ್ ಪದಗಳು	ಬಳಸಬಹುದಾದ ಪದಗಳು
ಏರೋಸಾಲ್	aerosol	ಗಾಳಿತುಣುಕು
ವಾಯುಕೂಪಿಕೆ	alveoli	ಗಾಳಿಗೂಡು
ನೀರ್ಲವಣೀಕರಣ	desalination	ಉಪ್ಪುಗಳೆತ / ಉಪ್ಪುತೆಗೆತ
ಗೃಹತ್ಯಾಜ್ಯ	domestic waste	ಮನೆಕಸ
ಉತ್ಪರಿವರ್ತನೆ	mutation	ಬಿರುಸುಬದಲಾವಣೆ / ಬೇಗಬದಲಿಕೆ
ಆರೋಹಣ	ascending	ಏರಿಕೆ
ಭಿದುರತ್ವ	brittleness	ಮುರಿತನ / ಒಡಕುತನ
ಕುಟ್ಯ	malleability	ತಟ್ಟಬಲ್ಲ
ತನ್ಯ	ductile	ಎಳೆಯಬಲ್ಲ / ಮೆದುತನ
ಬಹಿರುಷ್ಣಕ	exothermic	ಕಾವುಹೊರಹಾಕುವ / ಉಷ್ಣಹೊರಹಾಕುವ
ಅಂತರುಷ್ಣಕ	endothermic	ಕಾವುಹೀರುವ / ಉಷ್ಣಹೀರುವ
ಅದಹ್ಯತೆ	non combustible	ಉರಿಯಲಾರದ / ಉರಿಯಲಾರತನ
ಪುಷ್ಪಪತ್ರ	sepal	ಹೂವಿನೆಲೆ / ಹೂ ಎಲೆ
ಹೃತ್ಕರ್ಣ	atrium	ರಕ್ತಸೇರುಗೋಣೆ
ಹೃತ್ಕುಕ್ಷಿ	ventricle	ರಕ್ತತೊರೆಗೋಣೆ
ಅಂಡಜ	oviparous	ಮೊಟ್ಟೆಯಿಡುವ / ತತ್ತಿಯಿಡುವ
ಯುಗ್ಮಜ	zygote	ಕೂಡಾಣು
ಅಕಶೇರುಕ	invertebrate	ಬೆನ್ನುಮೂಳೆಯಿರದ
ಪ್ರಚ್ಛನ್ನ ಶಕ್ತಿ	potential energy	ಅಡಕ ಶಕ್ತಿ

ಕನ್ನಡದ ಬೇರು ಪದಗಳನ್ನೇ ಬಳಸಿ ಹಲವಾರು ಪಾರಿಭಾಷಿಕ ಪದಗಳಿಗೆ ಪದಗಳನ್ನು ಕಟ್ಟಬಹುದು ಎನ್ನುವುದನ್ನು ಮೇಲಿನ ಪಟ್ಟಿಯಿಂದ ಗಮನಿಸಬಹುದು. ಈ ಬಗೆಯ ಪದಗಳು ಮಕ್ಕಳಿಗೆ ಬೇಗನೇ ತಿಳಿಯುವುದರಿಂದ ಅವರು ಪದಗಳನ್ನು ಕಂಠಪಾಠ ಮಾಡುವುದು ತಪ್ಪುತ್ತದೆ ಮತ್ತು ಪದಗಳ ಹಿನ್ನೆಲೆಯಲ್ಲಿ ಅಡಗಿರುವ ವಿಜ್ಞಾನದ ವಿಷಯವನ್ನು ಅರಿಯಲು ಅವರು ಪ್ರಯತ್ನಿಸುತ್ತಾರೆ. ಉದಾಹರಣೆಗೆ, 'ಅದಹ್ಯತೆ' ಪದ ಬಳಸುವ ಬದಲು 'ಉರಿಯಲಾರದ' ಪದ ಬಳಸಿದರೆ ಮಕ್ಕಳಿಗೆ ಸುಲಭವಾಗಿ ತಿಳಿಯುತ್ತದೆ. 'ಹೃತ್ಕರ್ಣ' ಮತ್ತು 'ಹೃತ್ಕುಕ್ಷಿ' ಪದಗಳ ಬದಲಾಗಿ ರಕ್ತಸೇರುಗೋಣೆ ಮತ್ತು ರಕ್ತತೊರೆಗೋಣೆ ಬಳಸಿದರೆ, ಪದಗಳ ನೆರವಿನಿಂದ ತಿಳಿಸಲು ಹೊರಟಿರುವ ವಿಜ್ಞಾನದ ವಿಷಯ ಬೇಗನೇ ಅವರಿಗೆ ಅರಿವಾಗುತ್ತದೆ.

ಪದಗಳ ಮೂಲ ಮತ್ತು ನಡೆ:

ಕನ್ನಡ ಮಾಧ್ಯಮದ ವಿಜ್ಞಾನ ಪಠ್ಯಪುಸ್ತಕಗಳಲ್ಲಿನ ಪದಗಳ ಕುರಿತಾದ ಈ ಅಧ್ಯಯನದಲ್ಲಿ ಕಂಡುಬಂದ ಕೆಲವು ಅಂಶಗಳು ಈ ಕೆಳಗಿನಂತಿವೆ,

1. ಪಾರಿಭಾಷಿಕ ಪದಗಳಲ್ಲಿ ಕನ್ನಡ ಪರಿಸರದಲ್ಲಿ ಕಂಡುಬರುವ ಅದರ ಬೇರು ಪದಗಳ ಬಳಕೆ ಅಲ್ಲಲ್ಲಿ ಕಂಡುಬಂದರೂ (ಉದಾ: detritivorous ಪದಕ್ಕೆ 'ಕೊಳೆತಿನಿ' ಅನ್ನುವ ಪದ), ಒಟ್ಟಾರೆ ಪ್ರಮಾಣದಲ್ಲಿ ಅವುಗಳ ಬಳಕೆ ತುಂಬಾ ಕಡಿಮೆ ಇದೆ.
2. ಇಂಗ್ಲೀಶ್‌ನಲ್ಲಿ ಬಳಸಲಾಗುವ ಪದಗಳನ್ನೇ ನೇರವಾಗಿ (ಕನ್ನಡದ ಲಿಪಿಯಲ್ಲಿ) ಕೆಲವು ಕಡೆ ಬಳಸಲಾಗಿದೆ.
3. ಪಾರಿಭಾಷಿಕ ಪದಗಳಲ್ಲಿ ಹೆಚ್ಚಿನವು ಸಂಸ್ಕೃತ ಭಾಷೆಯ ಪದಗಳಾಗಿವೆ.

ಪಾರಿಭಾಷಿಕ ಪದಗಳಲ್ಲಿ ಹೆಚ್ಚಿನವು ಸಂಸ್ಕೃತ ಇಲ್ಲವೇ ಇಂಗ್ಲೀಶ್ ನುಡಿಯಿಂದ ತರಲಾದ ಎರವಲು ಪದಗಳಾಗಿದ್ದು, ಇವುಗಳು ಕನ್ನಡದ ಪರಿಸರದಿಂದ ದೂರವಿರುವುದರಿಂದ, ಪಠ್ಯದಲ್ಲಿರುವ ಪಾರಿಭಾಷಿಕ ಪದಗಳನ್ನು ತಿಳಿದುಕೊಳ್ಳುವುದು ಮತ್ತು ಆ ಮೂಲಕ ವಿಜ್ಞಾನದ ವಿಷಯಗಳನ್ನು ಅರಿತುಕೊಳ್ಳುವುದು ಮಕ್ಕಳಿಗೆ ತುಂಬಾ ಕಷ್ಟವೆನಿಸಬಹುದು. ಇಂತಹ ನಡೆಯ ಬದಲಾಗಿ ಕನ್ನಡದ ಸೊಗಡಿಗೆ ಹೊಂದುವ ಪದಗಳನ್ನು ಬಳಸಿದರೆ ಕಲಿಕೆಯನ್ನು ಸುಲಭವಾಗಿಸಬಹುದು.

ಹತ್ತನೆ ತರಗತಿಯ **ಉಷ್ಣ ಇಂಜಿನ್** ಎಂಬ ಪಾಠದಲ್ಲಿ ಬಳಸಲಾದ ಪದಗಳನ್ನು ಇಲ್ಲಿ ಉದಾಹರಣೆ ನೀಡುವುದು ಸೂಕ್ತವೆನಿಸುತ್ತದೆ. ಇಂಜಿನ್‌ವೊಂದರಲ್ಲಿರುವ ಬಡಿತಗಳನ್ನು (strokes) ತಿಳಿಸಲು ಈ ಕೆಳಗಿನ ಪದಗಳನ್ನು ನೀಡಲಾಗಿದೆ.

1. ಭುಕ್ತಿ
2. ಸಂಪೀಡನ
3. ಜ್ವಲನ
4. ವ್ಯಾಕೋಚನ
5. ನಿಷ್ಕಾಸ

ಕನ್ನಡದ ಪಠ್ಯಪುಸ್ತಕದಲ್ಲಿ ಬಳಸಲಾದ ಮೇಲಿನ ಸಂಸ್ಕೃತ ಭಾಷೆಯ ಪದಗಳ ಬದಲಾಗಿ ಕನ್ನಡದ ಬೇರು ಪದಗಳನ್ನು ಈ ಕೆಳಗಿನಂತೆ ಬಳಸಬಹುದು,

1. ಹೀರುವಿಕೆ
2. ಒತ್ತುವಿಕೆ
3. ಉರಿಯುವಿಕೆ
4. ಹರಡುವಿಕೆ
5. ತೊರೆಯುವಿಕೆ

ಈ ಮೇಲಿನ ಪದಗಳ ಉದಾಹರಣೆಯನ್ನು ಹೋಲಿಕೆ ಮಾಡಿದಾಗ ಸಂಸ್ಕೃತ ಇಲ್ಲವೇ ಇಂಗ್ಲೀಶ್ ಪದಗಳ ಹೋಲಿಕೆಯಲ್ಲಿ ಕನ್ನಡ ಬೇರು ಪದಗಳು ಮಕ್ಕಳ ಪರಿಸರಕ್ಕೆ ಹತ್ತಿರವಿದ್ದು, ತಿಳಿದುಕೊಳ್ಳಲು ಸುಲಭವೆನಿಸುವುದನ್ನು ಗಮನಿಸಬಹುದು.

ಸಂಸ್ಕೃತ	ಇಂಗ್ಲೀಶ್	ಕನ್ನಡ
ಭುಕ್ತಿ	Suction	ಹೀರುವಿಕೆ
ಸಂಪೀಡನ	Compression	ಒತ್ತುವಿಕೆ
ಜ್ವಲನ	Combustion	ಉರಿಯುವಿಕೆ
ವ್ಯಾಕೋಚನ	Expansion	ಹರಡುವಿಕೆ
ನಿಷ್ಕಾಸ	Exhaust	ತೊರೆಯುವಿಕೆ

ಹಸಿರು ಸಸ್ಯಗಳು ಮತ್ತು ಕಾರ್ಬೋಹೈಡ್ರೇಟಾಗಳು ಎಂಬ ಇನ್ನೊಂದು ಪಾಠದ ಉದಾಹರಣೆಯನ್ನು ಇಲ್ಲಿ ನೀಡಬಹುದು. ಹೂವಿನ ಭಾಗಗಳನ್ನು ತಿಳಿಸಲು ಈ ಕೆಳಗಿನ ಪದಗಳನ್ನು ಪಾಠದಲ್ಲಿ ಬಳಸಲಾಗಿದೆ,

1. ಶಲಾಕೆ
2. ಶಲಾಕಾಗ್ರ
3. ಪುಷ್ಪಪತ್ರ
4. ಪುಂಕೇಸರ
5. ಪರಾಗ
6. ಪುಷ್ಪದಳ

ಕನ್ನಡದ ಪಠ್ಯಪುಸ್ತಕದಲ್ಲಿ ಬಳಸಲಾದ ಮೇಲಿನ ಸಂಸ್ಕೃತ ಭಾಷೆಯ ಪದಗಳ ಬದಲಾಗಿ ಕನ್ನಡದ ಬೇರು ಪದಗಳನ್ನು ಈ ಕೆಳಗಿನಂತೆ ಬಳಸಬಹುದು,

1. ಹೆಣ್ಣುದಳ
2. ಹೆಣ್ಣುದಳದ ತುದಿ
3. ಹೂ ಎಲೆ / ಹೂವಿನೆಲೆ
4. ಗಂಡುದಳ
5. ಹೂಪುಡಿ / ಹೂಬಂಡು
6. ಹೂದಳ / ಹೂ ಎಸಳು

ಪದಗಳ ಒಟ್ಟಾರೆ ಹೋಲಿಕೆಯನ್ನು ಮಾಡಿದಾಗ ಕನ್ನಡದ ಬೇರು ಪದಗಳು ಮಕ್ಕಳ ತಿಳುವಳಿಕೆಗೆ ಹೆಚ್ಚು ಹತ್ತಿರವೆನಿಸುವುದನ್ನು ಗಮನಿಸಬಹುದು.

ಸಂಸ್ಕೃತ	**ಇಂಗ್ಲೀಶ್**	**ಕನ್ನಡ**
ಶಲಾಕೆ	Carpel	ಹೆಣ್ಣುದಳ
ಶಲಾಕಾಗ್ರ	Stigma	ಹೆಣ್ಣುದಳದ ತುದಿ
ಪುಷ್ಪಪತ್ರ	Sepal	ಹೂ ಎಲೆ
ಪುಂಕೇಸರ	Stamen	ಗಂಡುದಳ
ಪರಾಗ	Pollen	ಹೂಬಂಡು
ಪುಷ್ಪದಳ	Petal	ಹೂದಳ

ಮೇಲಿನ ಪದಗಳ ಉದಾಹರಣೆಯನ್ನು ಚಿತ್ರದಲ್ಲಿ ಕೆಳಗಿನಂತೆ ತೋರಿಸಬಹುದು *(ಚಿತ್ರಮೂಲ: Pearson Education Inc.)*

ಸಂಸ್ಕೃತ ಮೂಲದ ಪದಗಳನ್ನು ಬಳಸಿ ಹೂವಿನ ಭಾಗಗಳನ್ನು ತೋರಿಸುತ್ತಿರುವ ಚಿತ್ರ



ಕನ್ನಡ ಮೂಲದ ಪದಗಳನ್ನು ಬಳಸಿ ಹೂವಿನ ಭಾಗಗಳನ್ನು ತೋರಿಸುತ್ತಿರುವ ಚಿತ್ರ



ಪಠ್ಯಪುಸ್ತಕದ ಹಲವಾರು ಕಡೆ ಇಂಗ್ಲೀಶ್ ಪಠ್ಯದಲ್ಲಿ ಬಳಸಿದ ಪದಗಳನ್ನೇ ಕನ್ನಡ ಲಿಪಿಯಲ್ಲಿ ಉಳಿಸಿಕೊಳ್ಳಲಾಗಿದೆ. ಇಂತಹ ಒಂದು ಉದಾಹರಣೆಯನ್ನು ಹತ್ತನೆ ತರಗತಿಯ **ಸಸ್ಯ ಮತ್ತು ಪ್ರಾಣಿಗಳಲ್ಲಿ ಸಹಭಾಗಿತ್ವ ಮತ್ತು ನಿಯಂತ್ರಣ** ಎಂಬ ಪಾಠದಿಂದ ತೆಗೆದುಕೊಳ್ಳಬಹುದು. ಈ ಪಾಠದಲ್ಲಿ ಕೆಳಗಿನ ಪದಗಳನ್ನು ಬಳಸಲಾಗಿದೆ.

1. ಕಾಕ್ಲೀರಾ
2. ಕಾರ್ಟಯ್
3. ಯುಟ್ರಿಕ್ಯುಲಸ್
4. ಸ್ಯಾಕ್ಯುಲಸ್
5. ಯುಸ್ಟೇಶಿಯನ್
6. ಎಂಡೋಲಿಂಫ್
7. ಪೆರಿಲಿಂಫ್

ಈ ಮೇಲಿನ ಪದಗಳು ಕನ್ನಡದ ಪರಿಸರದಲ್ಲಿ ಬೆಳೆದ ಮಕ್ಕಳಿಗೆ ತಿಳಿಯಲಾರವು. ಇವುಗಳ ಬದಲಾಗಿ ಕನ್ನಡದ ಪರಿಸರಕ್ಕೆ ಹತ್ತಿರವಿರುವ ಪದಗಳನ್ನು ಕೆಳಗಿನಂತೆ ಬಳಸಬಹುದು.

1. ಕಿವಿಸುರುಳಿ, ಕಿವಿಗುಳಿ
2. ಕಿವಿಗುಳಿ ಅರಿಯುಕ
3. ಕಿವಿಚೀಲ
4. ಕಿವಿಮೆತ್ತೆ
5. ಕಿವಿಗೊಳವೆ
6. ಕಿವಿರಸ
7. ಕಿವಿಗುಳಿರಸ

ಪಠ್ಯಪುಸ್ತಕಗಳ ಪದಗಳ ಬಳಕೆಯಲ್ಲಿ ಕಂಡುಬಂದ ಇನ್ನೊಂದು ನಡೆಯೆಂದರೆ ಸಾಮಾನ್ಯವಾಗಿ ಬಳಕೆಯಾಗುವ ಪದಗಳನ್ನೂ ಬಿಟ್ಟು ತೊಡಕಾದ ಪದಗಳನ್ನು ಬಳಸಲಾಗಿದೆ. ಉದಾಹರಣೆಗೆ; ಹೊರ, ಒಳ, ತೇಲು, ಏರಿಕೆ, ಇಳಿಕೆ, ಮರಿ, ಉಗುರು, ಹೊಟ್ಟೆ, ಮೂಗು ಮುಂತಾದ ಪದಗಳ ಬದಲಾಗಿ ಬಾಹ್ಯ, ಅಂತರ್, ಪ್ಲವಕ, ಆರೋಹಣ, ಅವರೋಹಣ, ಡಿಂಭ, ನಖ, ಉದರ, ನಾಸಿಕ ಮುಂತಾದ ಪದಗಳನ್ನು ಪಠ್ಯಪುಸ್ತಕಗಳಲ್ಲಿ ಬಳಸಲಾಗಿದೆ.

ಈ ಬಗೆಯ ಪದಗಳ ಬಳಕೆ ಮಕ್ಕಳ ಕಲಿಕೆಗೆ ದೊಡ್ಡ ತೊಡಕುಂಟು ಮಾಡಬಲ್ಲದು ಏಕೆಂದರೆ ಪದಗಳು ಸುಲಭವಾಗಿ ಅರ್ಥವಾಗದಿದ್ದಾಗ ಹೆಚ್ಚಿನ ಮಕ್ಕಳು ಆ ಪದಗಳನ್ನು ಕಂಠಪಾಠ ಮಾಡಲು ತೊಡಗುತ್ತಾರೆ. ಆಗ ಪದಗಳು ತಾವಾಗೇ ಹೊಮ್ಮಿಸುವ ತಿಳುವಳಿಕೆಯು ಮಕ್ಕಳಿಗೆ ಎಟಕುವುದಿಲ್ಲ ಮತ್ತು ವಿಜ್ಞಾನದಂತಹ ಕಲಿಕೆಯ ವಿಷಯ ಅವರಿಂದ ದೂರ ಉಳಿಯುವ ಸಾಧ್ಯತೆ ಹೆಚ್ಚುತ್ತದೆ.

ಸಾಟಿ ಪದಗಳ ಕಟ್ಟಣೆಯ ಬಗೆ:

ಮೇಲೆ ಉದಾಹರಣೆ ನೀಡಿದ ಕೆಲವು ಪದಗಳು ಮತ್ತು ವರದಿಯ ಕೊನೆಯಲ್ಲಿರುವ ಸಾಟಿ ಪದಗಳ ಪಟ್ಟಿಯನ್ನು ಗಮನಿಸಿದರೆ, ಪಾರಿಭಾಷಿಕ ಪದಗಳ ಕಟ್ಟಣೆಯ ಬಗೆಯನ್ನು ಊಹಿಸಬಹುದು. ಈ ಅಧ್ಯಯನದಲ್ಲಿ ತೊಡಗಿದ ತಂಡ ಆದಷ್ಟು ಕನ್ನಡದ ಪರಿಸರಕ್ಕೆ ಹತ್ತಿರವಾಗಿರುವ, ವಿಷಯವನ್ನು ಮನದಟ್ಟು ಮಾಡಲು ನೆರವಾಗಬಲ್ಲ ಪದಗಳನ್ನು ಕಟ್ಟುವ ಪ್ರಯತ್ನ ಮಾಡಿದೆ. ಪದಕಟ್ಟಣೆಯಲ್ಲಿ ಕೆಳಗಿನ ಕೆಲವು ಅಂಶಗಳನ್ನು ಗಮನಿಸಬಹುದು,

- ಪರಿಚಯವಿರದ ಪದಗಳ ಬದಲಾಗಿ ಆದಷ್ಟು ಗೊತ್ತಿರುವ ಪದಗಳಿಂದ ಪಾರಿಭಾಷಿಕ ಪದಗಳನ್ನು ಕಟ್ಟಲಾಗಿದೆ. ಉದಾ: ಉತ್ಪವರಿರ್ತನೆ ಅನ್ನುವ ಬದಲು ಬಿರುಸುಬದಲಾವಣೆ, ಏರೋಸಾಲ್ ಪದಕ್ಕೆ ಸಾಟಿಯಾಗಿ ಗಾಳಿತುಣುಕು, ಯುಗ್ಮಜ ಅನ್ನುವುದಕ್ಕೆ ಕೂಡಾಣು, ಪ್ರಚ್ಛನ್ನ ಶಕ್ತಿ ಪದಕ್ಕೆ ಅಡಕ ಶಕ್ತಿ ಅನ್ನುವಂತಹ ಪದಗಳನ್ನು ಮುಂದಿಡಲಾಗಿದೆ.
- ವಿಷಯವೊಂದಕ್ಕೆ ಸಂಬಂಧಿಸಿದ ಪದಗಳಿಗೆ ಆ ವಿಷಯದ ಪ್ರತ್ಯಯವನ್ನು ಬಳಸಿ ಕೆಲವು ಕಡೆ ಪದಗಳನ್ನು ಕಟ್ಟಲಾಗಿದೆ. ಉದಾ: ಕಿವಿಗೆ ಸಂಬಂಧಿಸಿದ ವಿಷಯವನ್ನು ಹೇಳುವಾಗ ಕಾಕ್ಲೀರ್, ಕಾರ್ಟಯ್, ಯುಟ್ರಿಕ್ಯುಲಸ್, ಸ್ಯಾಕುಲಸ್ ಮುಂತಾದ ಪದಗಳ ಬದಲಾಗಿ 'ಕಿವಿ' ಪ್ರತ್ಯಯವನ್ನು ಬಳಸಿ ಕಿವಿಗುಳಿ, ಕಿವಿಚೀಲ, ಕಿವಿಮೆತ್ತೆ ಮುಂತಾದ ಪದಗಳನ್ನು ಕಟ್ಟಲಾಗಿದೆ. ಹೀಗೆ ಮಾಡುವುದರಿಂದ ಈ ಪದಗಳು ಕಿವಿಗೆ ಸಂಬಂಧಿಸಿದ ವಿಷಯವನ್ನು ತಿಳಿಸಿಕೊಡುತ್ತಿವೆ ಎಂದು ಮಕ್ಕಳಿಗೆ ಬೇಗನೇ ಅರಿವಾಗಬಲ್ಲದು.
- ಪಾರಿಭಾಷಿಕ ಪದಗಳನ್ನು ಕಟ್ಟುವಾಗ ಕೂಡು, ಗಾಳಿ, ಬಿರುಸು ಮುಂತಾದ ಕನ್ನಡದ ಬೇರು ಪದಗಳಲ್ಲದೇ, ಪರಿಚಯವಿರುವ ರಕ್ತ, ಶಕ್ತಿ, ರಸ, ಅಣು ಮುಂತಾದ ಬೇರೆ ನುಡಿಯ ಪದಗಳನ್ನೂ ಬಳಸಲಾಗಿದೆ.

ಗಮನಕ್ಕೆ: ಈ ಅಧ್ಯಯನದಲ್ಲಿ ನೀಡಿದ ಸಾಟಿ ಪದಗಳು ಎಲ್ಲವೂ ಸರಿ ಇಲ್ಲವೇ ಇವುಗಳನ್ನೇ ಬಳಸಬೇಕು ಅನ್ನುವುದು ಅಧ್ಯಯನದಲ್ಲಿ ತೊಡಗಿದ ತಂಡದ ಉದ್ದೇಶವಲ್ಲ. ಆಯ್ಕೆಯಾಗಿ ನೀಡಿದ ಪದಗಳಲ್ಲಿ ತಿದ್ದುಪಡಿಗಳಿದ್ದರೆ ಸರಿಪಡಿಸಿ, ಇನ್ನೂ ಚನ್ನಾಗಿರುವ ಬೇರೆ ಆಯ್ಕೆಗಳಿದ್ದರೆ ಅಂತಹ ಪದಗಳನ್ನೂ ಸಂಬಂಧಪಟ್ಟವರು ಬಳಸಿಕೊಳ್ಳಬಹುದು. ಈ ಅಧ್ಯಯನದ ಒಟ್ಟಾರೆ ಉದ್ದೇಶವೆಂದರೆ ಈಗಿರುವ ವ್ಯವಸ್ಥೆಯಲ್ಲಿ ಇಂತಹ ಚರ್ಚೆಗಳು ಆಗುತ್ತಿಲ್ಲವಾದ್ದರಿಂದ ಮಕ್ಕಳ ಕಲಿಕೆ ತೊಡಕಾಗಿದೆ ಎಂಬುದನ್ನು ತಿಳಿಸುವುದು ಮತ್ತು ಈ ಸಮಸ್ಯೆಯನ್ನು ಬಗೆಹರಿಸಬೇಕಾದ ಅಗತ್ಯತೆಯನ್ನು ಮನದಟ್ಟು ಮಾಡುವುದಾಗಿದೆ.

ಬೇರು ಪದಗಳ ಬದಲಾಗಿ ಎರವಲು ಪದಗಳ ಬಳಕೆಗೆ ಕಾರಣಗಳ ಹುಡುಕಾಟ:

ಈ ಅಧ್ಯಯನದ ಅಂಗವಾಗಿ ಪಠ್ಯಪುಸ್ತಕಗಳಲ್ಲಿ ಪದಗಳ ಬಳಕೆಯ ಕುರಿತು ಶಿಕ್ಷಕರನ್ನು ಒಳಗೊಂಡಂತೆ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರೊಡನೆ ಚರ್ಚಿಸಲಾಯಿತು. ಎರಡು ಸುತ್ತಿನಲ್ಲಿ ನಡೆದ ಚರ್ಚೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸುಮಾರು 60 ಜನರು ಪಾಲ್ಗೊಂಡಿದ್ದರು. ಈ ಚರ್ಚೆಯಲ್ಲಿ ಪದಗಳ ಪ್ರಾಮುಖ್ಯತೆಯನ್ನು ಮತ್ತು ಈ ನಿಟ್ಟಿನಲ್ಲಿ ಕನ್ನಡದ ಪರಿಸರಕ್ಕೆ ಹತ್ತಿರವಿರುವ ಪದಗಳನ್ನು ಬಳಸಿದರೆ ಆಗುವ ಪ್ರಯೋಜನವನ್ನು ಚರ್ಚೆಯಲ್ಲಿ ಪಾಲ್ಗೊಂಡವರಲ್ಲಿ ಹೆಚ್ಚಿನವರು ಒಪ್ಪಿಕೊಂಡರಾದರೂ, ಈ ಮಾತುಕತೆಯಲ್ಲಿ ಕೇಳಿಬಂದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ತಿಳಿಸುವುದು ಸೂಕ್ತವೆನಿಸುತ್ತದೆ.

1. ಪಠ್ಯಪುಸ್ತಕಗಳಲ್ಲಿ ಬಳಸಲಾಗುವ ಪದಗಳ ಪ್ರಾಮುಖ್ಯತೆಯ ಕಡೆಗೆ ಈ ಕ್ಷೇತ್ರದಲ್ಲಿರುವವರು ಹೆಚ್ಚಿನ ಗಮನ ಕೊಡಬೇಕಿದೆ. ಪಠ್ಯಪುಸ್ತಕಗಳನ್ನು ರಚಿಸುವಾಗ ವಿಷಯಗಳ ಬಗ್ಗೆ ಚರ್ಚೆಯಾಗುತ್ತದೆ ಹೊರತು ಪದಗಳ ಕುರಿತು ಅಷ್ಟೇನು ಚರ್ಚೆಗಳು ಇಂದು ನಡೆಯುತ್ತಿಲ್ಲ.

2. ಕನ್ನಡದಲ್ಲಿ ವೈಜ್ಞಾನಿಕ ಪದಗಳಿಲ್ಲದಿರುವುದರಿಂದ ಪಾರಿಭಾಷಿಕ ಪದಗಳಲ್ಲಿ ಹೆಚ್ಚಿನವು ಎರವಲು ಪದಗಳಾಗಿವೆ ಎಂದು ಕೆಲವರು ಅನಿಸಿಕೆ ವ್ಯಕ್ತಪಡಿಸಿದರು.

3. ಕನ್ನಡದಲ್ಲಿ ವೈಜ್ಞಾನಿಕ ಪದಗಳನ್ನು ಕಟ್ಟಲು ಸಾಧ್ಯವಿಲ್ಲ ಇಲ್ಲವೇ ತುಂಬಾ ಕಷ್ಟದ ಕೆಲಸ. ಪದಗಳನ್ನು ಕಟ್ಟುವವರು ಇಲ್ಲ ಇಲ್ಲವೇ ಪದಗಳನ್ನು ಯಾರು ಕಟ್ಟುವರು? ಎಂಬಂತಹ ಅನಿಸಿಕೆಗಳು ಮೂಡಿಬಂದವು.

4. ಬಳಕೆಯಲ್ಲಿರುವ ಸಾಮಾನ್ಯ ಪದಗಳನ್ನೇ ಬಳಸಿದರೆ ಅವು ವೈಜ್ಞಾನಿಕ ಪದಗಳಾಗುವುದಿಲ್ಲ ಅನ್ನುವುದು ಕೆಲವರ ಅನಿಸಿಕೆಯಾಗಿತ್ತು.

5. ಸಂಸ್ಕೃತ ಪದಗಳು ಆಗಲೇ ಬಳಕೆಯಲ್ಲಿವೆ. ಅವು ಕನ್ನಡಿಗರಿಗೆ ತಿಳಿಯುತ್ತವೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರು.

6. ಇಂಗ್ಲೀಶ್ ಪದಗಳನ್ನು ಕನ್ನಡ ಲಿಪಿಯಲ್ಲಿ ಹಾಗೆಯೇ ಉಳಿಸಿಕೊಳ್ಳುವುದು ಸರಿ. ಉನ್ನತ ಕಲಿಕೆ ಇಂಗ್ಲೀಶ್‌ನಲ್ಲೇ ಇರುವುದರಿಂದ ಹೀಗೆ ಮಾಡಬೇಕಾಗುತ್ತದೆ ಎಂಬ ಅನಿಸಿಕೆ.

7. ಪಾರಿಭಾಷಿಕ ಪದಗಳು ಕಠಿಣವಾಗಿಯೇ ಇರುತ್ತವೆ, ಮಕ್ಕಳು ಓದಿನಲ್ಲಿ ಶ್ರಮವಹಿಸಬೇಕಷ್ಟೇ. ಶ್ರಮವಹಿಸಿ ಪದಗಳನ್ನು ಓದುತ್ತಾ ಹೋದಂತೆ ಅವು ಅವರಿಗೆ ಪರಿಚಯವಾಗುತ್ತವೆ ಮತ್ತು ಇದರಿಂದ ಮಕ್ಕಳ ಶಬ್ದ ಭಂಡಾರ ಹೆಚ್ಚುತ್ತದೆ ಎಂಬಂತಹ ಅಭಿಪ್ರಾಯಗಳು ಮೂಡಿಬಂದವು.

8. ಸುಲಭವಾದ ಪಾರಿಭಾಷಿಕ ಪದಗಳನ್ನು ಜಾರಿಗೆ ತರುವ ಅಗತ್ಯವಿದೆ ಆದರೆ ಅದನ್ನು ಜಾರಿಗೆ ತರುವುದು ಹೇಗೆ? ಪಠ್ಯಪುಸ್ತಕಗಳನ್ನು ಒಮ್ಮೆಲೇ ಬದಲಿಸಿದರೆ ಗೊಂದಲವಾಗುವುದಿಲ್ಲವೇ?

ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರ ಮೇಲಿನ ಕೆಲವು ಅನಿಸಿಕೆಗಳಿಗೆ ನಮ್ಮ ತಂಡದ ಅಭಿಪ್ರಾಯಗಳು ಹೀಗಿದ್ದವು,

1. ***ಪಠ್ಯಪುಸ್ತಕಗಳಲ್ಲಿ ಬಳಸಲಾಗುವ ಪದಗಳ ಪ್ರಾಮುಖ್ಯತೆಯ ಕಡೆಗೆ ಈ ಕ್ಷೇತ್ರದಲ್ಲಿರುವವರು ಹೆಚ್ಚಿನ ಗಮನ ಕೊಡಬೇಕಿದೆ. ಪಠ್ಯಪುಸ್ತಕಗಳನ್ನು ರಚಿಸುವಾಗ ವಿಷಯಗಳ ಬಗ್ಗೆ ಚರ್ಚೆಯಾಗುತ್ತದೆ ಹೊರತು ಪದಗಳ ಕುರಿತು ಅಷ್ಟೇನು ಚರ್ಚೆಗಳು ಇಂದು ನಡೆಯುತ್ತಿಲ್ಲ.***

ನುಡಿ ಮತ್ತು ಕಲಿಕೆಗೆ ತುಂಬಾ ಹತ್ತಿರವಾದ ನಂಟಿರುತ್ತದೆ ಹಾಗಾಗಿ ಪಠ್ಯಪುಸ್ತಕಗಳಲ್ಲಿ ಬಳಸಿರುವ ಪದಗಳನ್ನು, ವಾಕ್ಯಗಳನ್ನು ನುಡಿಯ ಸೊಗಡಿಗೆ ಹೊಂದಿಸುವುದು ತುಂಬಾ ಅಗತ್ಯವಾಗಿದೆ. ಪಠ್ಯಪುಸ್ತಕಗಳ ಸಿಲೆಬಸ್ ಏನಿರಬೇಕು ಎನ್ನುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದ ವಿಷಯವೆಂದರೆ ಪದಗಳ, ವಾಕ್ಯಗಳ ಬಳಕೆ. ಒಟ್ಟಾರೆಯಾಗಿ ನುಡಿಯ ಬಳಕೆ ಪಠ್ಯಪುಸ್ತಕಗಳಲ್ಲಿ ಸರಿಯಾಗಿ ಆದರಷ್ಟೇ ತಾಯ್ನುಡಿ ಮಾಧ್ಯಮದ ಒಳಿತುಗಳು ಮಕ್ಕಳಿಗೆ ತಲುಪುತ್ತವೆ. ಈ ನಿಟ್ಟಿನಲ್ಲಿ ಪಠ್ಯಪುಸ್ತಕಗಳನ್ನು ರಚಿಸುವಾಗ ಸಾಕಷ್ಟು ಚರ್ಚೆಗಳಾಗಬೇಕು.

2. ***ಕನ್ನಡದಲ್ಲಿ ವೈಜ್ಞಾನಿಕ ಪದಗಳಿಲ್ಲದಿರುವುದರಿಂದ ಪಾರಿಭಾಷಿಕ ಪದಗಳಲ್ಲಿ ಹೆಚ್ಚಿನವು ಎರವಲು ಪದಗಳಾಗಿವೆ.***

ನುಡಿಯೊಂದರಲ್ಲಿ ವೈಜ್ಞಾನಿಕ ಪದಗಳಾಗಲಿ ಇಲ್ಲವೇ ಬೇರೆ ವಿಷಯದ ಪದಗಳಾಗಲಿ ಮೊದಲಿನಿಂದಲೇ ಎಲ್ಲವೂ ಇರುವುದಿಲ್ಲ. ಹೊಸ ಹೊಸ ಆಯಾಮಗಳು ನುಡಿಯೊಂದಕ್ಕೆ ಬಂದಂತೆಲ್ಲ ಆಯಾ ನುಡಿ ಸಮುದಾಯ ತಮ್ಮ ನುಡಿಯನ್ನು ಸಜ್ಜುಗೊಳಿಸಬೇಕಾಗುತ್ತದೆ. ಉದಾಹರಣೆಗೆ, 17 ರಿಂದ 19 ನೇ ಶತಮಾನದಲ್ಲಿ ಜಪಾನೀಯರಿಗೆ ಡಚ್ಚರಿಂದ ಹಲವಾರು ವೈಜ್ಞಾನಿಕ ಸಲಕರಣೆಗಳು, ವಿಷಯಗಳು ಪರಿಚಯವಾದವು. ಹೀಗೆ ಪರಿಚಯವಾಗುವ ಹೊತ್ತಿನಲ್ಲಿ ಜಪಾನೀಯರು ತಮ್ಮ ಜಪಾನೀಸ್ ನುಡಿಯಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಪದಗಳನ್ನು ಕಟ್ಟಿ ತಮ್ಮ ನುಡಿಯನ್ನು ವಿಜ್ಞಾನದಂತಹ ಹೊಸ ಆಯಾಮಕ್ಕೆ ಸಜ್ಜುಗೊಳಿಸುತ್ತಾ ಸಾಗಿದರು.

ಈ ಕಟ್ಟಣೆಯಲ್ಲಿ ಕೆಲವು ಎರವಲು ಪದಗಳನ್ನು ಮತ್ತು ಹಲವಾರು ಬೇರು ಪದಗಳನ್ನು ಬಳಸಿ ಅವರು ಪಾರಿಭಾಷಿಕ ಪದಗಳನ್ನು ಕಟ್ಟಿದರು. ಜಪಾನೀಯರು ಕೈಗೊಂಡ ಅರಿವಿನ ಈ ಚಳುವಳಿಯನ್ನು **ರಂಗಾಕು ಚಳುವಳಿ** (ಅಂದರೆ ಪಶ್ಚಿಮದ ನಾಡಿನಿಂದ ಕಲಿಯುವುದು) ಎಂದು ಗುರುತಿಸಲಾಗಿದೆ. ಈ ಕೆಲಸದಲ್ಲಿ ಬಲ್ಲವರು, ನುರಿತವರ ಜತೆ ಸಾಮಾನ್ಯ ಮಂದಿಯೂ ಪಾಲ್ಗೊಂಡಿದ್ದ ವಿಷಯವನ್ನು ಇತಿಹಾಸದ ಪುಟಗಳಿಂದ ತಿಳಿದುಕೊಳ್ಳಬಹುದು. ವಿಜ್ಞಾನವನ್ನು ಜಪಾನೀಸ್ ನುಡಿಗೆ ಒಗ್ಗಿಸುವ ಈ ಚಳುವಳಿಯಿಂದಾಗಿ ಇಂದು ಜಪಾನ್ ವಿಜ್ಞಾನ ಮತ್ತು ತಂತ್ರಜ್ಞಾನದ ಹಲವಾರು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದೆ.

ಈ ಹೊತ್ತಿನಲ್ಲಿ ಅಂದರೆ ಸುಮಾರು 17-18 ನೇ ಶತಮಾನದಲ್ಲಿ ಮೂಡಿಬಂದ ಮೈಕ್ರೊಸ್ಕೋಪ್ ಬಗ್ಗೆ ತಿಳಿಸುವ, ಜಪಾನೀಸ್ ನುಡಿಯಲ್ಲಿರುವ ಚಿತ್ರವೊಂದನ್ನು ಕೆಳಗೆ ನೋಡಬಹುದು. *(ಚಿತ್ರಮೂಲ: http://en.wikipedia.org/)*

ಈ ತರಹದ ಪದಕಟ್ಟಣೆಯ ಕೆಲಸ ಜಪಾನಲ್ಲಷ್ಟೇ ಅಲ್ಲದೇ ಕೊರಿಯಾ, ಇಸ್ರೇಲ್, ಫ್ರಾನ್ಸ್, ಫಿನ್‌ಲ್ಯಾಂಡ್ ಮುಂತಾದ ನುಡಿ ಸಮುದಾಯಗಳಲ್ಲಿ, ಕೆಲವೊಂದು ಕಾಲಘಟ್ಟದಲ್ಲಿ ನಡೆದಿದೆ. ಈ ಕೆಲಸ ಕನ್ನಡ ನುಡಿ ಸಮುದಾಯದಲ್ಲೂ ವ್ಯವಸ್ಥಿತವಾಗಿ, ಕೂಡಲೇ ಆಗಬೇಕಿದೆ.

3. ***ಕನ್ನಡದಲ್ಲಿ ವೈಜ್ಞಾನಿಕ ಪದಗಳನ್ನು ಕಟ್ಟಲು ಸಾಧ್ಯವಿಲ್ಲ ಇಲ್ಲವೇ ತುಂಬಾ ಕಷ್ಟದ ಕೆಲಸ. ಪದಗಳನ್ನು ಕಟ್ಟುವವರು ಇಲ್ಲ ಇಲ್ಲವೇ ಪದಗಳನ್ನು ಯಾರು ಕಟ್ಟುವರು? ಎಂಬಂತಹ ಅನಿಸಿಕೆಗಳು.***

ಈ ಅನಿಸಿಕೆ ಮೂಡಲು ಮುಖ್ಯವಾದ ಕಾರಣವೆಂದರೆ ಪದಕಟ್ಟಣೆಯಲ್ಲಿ ಕನ್ನಡಿಗರು ತುಂಬಾ ಕಡಿಮೆ ಕೆಲಸ ಮಾಡಿರುವುದು ಮತ್ತು ತಿಳಿದೋ-ತಿಳಿಯದೆಯೋ ಎರವಲು ಪದಗಳಿಗೇ ಮನ್ನಣೆ ಕೊಟ್ಟಿದ್ದು. ಉದಾಹರಣೆಗೆ; Photon ಎಂಬ ವಿಜ್ಞಾನದ ಪದವೊಂದಕ್ಕೆ ಕನ್ನಡದಲ್ಲಿ ಪದಕಟ್ಟಬೇಕು ಎಂದೊಡನೇ ಸಂಸ್ಕೃತದ 'ದ್ಯುತಿ' ಪದದಿಂದಲೇ ಪದಕಟ್ಟಲು ಹೆಚ್ಚಿನವರು ಮುಂದಾಗುತ್ತಾರೆ ಹೊರತು ಕನ್ನಡದ 'ಬೆಳಕು' ಪದದಿಂದ ಇದಕ್ಕೆ ಹೊಂದುವ ಪದಕಟ್ಟಬಹುದು ಎನ್ನುವುದನ್ನು ಮರೆಯುತ್ತಾರೆ. (ಉದಾ; ಬೆಳಕಿ, ಬೆಳವಣಿ, ಬೆಳಕಿನ ಕಣ ಮುಂತಾದವು)

ನಿಜವಾಗಿ ನೋಡಿದರೆ ಕನ್ನಡದಲ್ಲಿ ವಿಜ್ಞಾನದ ಪದಗಳನ್ನು ಕಟ್ಟುವುದು ಕಷ್ಟದ ಕೆಲಸವಲ್ಲ. ಭಾಷಾವಿಜ್ಞಾನಿಗಳ ಪ್ರಕಾರ ಜಗತ್ತಿನ ಬೇರಾವುದೇ ನುಡಿಗೆ ಇರುವಷ್ಟೇ ಪದಕಟ್ಟಣೆಯ ಕಸುವು ಕನ್ನಡಕ್ಕೂ ಇದೆ. ಈ ನಿಟ್ಟಿನಲ್ಲಿ ಡಾ.ಡಿ.ಎಸ್.ಶಿವಪ್ಪ ಅವರಂತಹ ಮಹನೀಯರು 1970 ರಷ್ಟು ಹಿಂದೆಯೇ ಹೆಚ್ಚಾಗಿ ಕನ್ನಡದ ಬೇರು ಪದಗಳನ್ನು ಬಳಸಿ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ ಪದಕೋಶ ರಚಿಸಿರುವುದನ್ನು ಗಮನಿಸಬಹುದು.

ಇನ್ನು, ಪದಗಳನ್ನು ಕಟ್ಟವವರು ಇಲ್ಲ ಇಲ್ಲವೇ ಯಾರು ಪದಗಳನ್ನು ಕಟ್ಟಬೇಕು ಎಂಬ ಪ್ರಶ್ನೆಗೆ ಉತ್ತರವೆಂದರೆ ಪದಕಟ್ಟಲು ಇಂತದೇ ಗೊತ್ತುಪಡಿಸಿದ ಅರ್ಹತೆ ಇರಲೇಬೇಕು ಅನ್ನುವುದು ಸರಿಯಲ್ಲ. ವಿಜ್ಞಾನ ತಂತ್ರಜ್ಞಾನ ಕ್ಷೇತ್ರವೊಂದರಲ್ಲಿ ಕೆಲಸ ಮಾಡಿದ ಅನುಭವವಿರುವವರು ಪದಕಟ್ಟಿದರೆ ಒಳಿತು ಎಂದು ಹೇಳಬಹುದಾದರೂ ಪದಕಟ್ಟಣೆಯಲ್ಲಿ ಆಸಕ್ತಿಯಿರುವ ಸಾಮಾನ್ಯ ಜನರೂ ಈ ಕೆಲಸದಲ್ಲಿ ತೊಡಗಿಕೊಳ್ಳಬಹುದು. ಕಟ್ಟಿದ ಪದಗಳು ಆಯಾ ವಿಷಯವನ್ನು ಹೇಳಲು ತಕ್ಕುದಾಗಿವೆಯೇ ಎಂದು ಚರ್ಚೆ ಮಾಡಿದ ಬಳಿಕ ಬಳಕೆಗೆ ತರುವ ಕೆಲಸ ಮಾತ್ರ ಇಲ್ಲಿ ಮುಖ್ಯವಾಗುತ್ತದೆ.

ಈ ನಿಟ್ಟಿನಲ್ಲಿ ಯೋಚಿಸಿದಾಗ ವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಾಗಲಿ ಇಲ್ಲವೇ ಪಾರಿಭಾಷಿಕ ಪದಕಟ್ಟಣೆಯಲ್ಲಿ ಆಸಕ್ತಿಯಿರುವವರೇ ಆಗಲಿ ತಾವೇ ತಂಡಗಳನ್ನು ಮಾಡಿಕೊಂಡು, ಚರ್ಚೆಗಳ ಮೂಲಕ ಪದಕಟ್ಟಣೆಯಲ್ಲಿ ತೊಡಗಬಹುದು.

ವಿಜ್ಞಾನ ಶಿಕ್ಷಕರನ್ನು ಒಳಗೊಂಡಂತೆ ಶಿಕ್ಷಣ ಕ್ಷೇತ್ರದಲ್ಲಿಯೇ ಹಲವು ತಂಡಗಳನ್ನು ಮಾಡಿ, ಚರ್ಚೆ, ಪ್ರಯೋಗಗಳ ಮೂಲಕ ಪದಕಟ್ಟಣೆಯಲ್ಲಿ ತೊಡಗಿಕೊಳ್ಳಬಹುದು.

4. ***ಬಳಕೆಯಲ್ಲಿರುವ ಸಾಮಾನ್ಯ ಪದಗಳನ್ನೇ ಬಳಸಿದರೆ ಅವು ವೈಜ್ಞಾನಿಕ ಪದಗಳಾಗುವುದಿಲ್ಲ.***

ಸಾಮಾನ್ಯ ಬಳಕೆಯಲ್ಲಿರುವ ಪದಗಳಿಗೂ ಮತ್ತು ವೈಜ್ಞಾನಿಕ ಪದಗಳಿಗೂ ಅಂತದೇನೂ ವ್ಯತ್ಯಾಸವಿರುವುದಿಲ್ಲ. ಉದಾಹರಣೆಗೆ, ಈ ವರದಿಯಲ್ಲಿ ಉದಾಹರಣೆಯಾಗಿ ಬಳಸಿದ Suction, Compression ಮುಂತಾದ ಪದಗಳು ಇಂಗ್ಲೀಶಿನಲ್ಲಿ ದಿನಬಳಕೆಯ ಪದಗಳು. ಆ ಪದಗಳು ದಿನಬಳಕೆಯ ಬೇರೆ ಬೇರೆ ಸಂದರ್ಭದಲ್ಲಿ ಬಳಕೆಯಾಗುತ್ತವೆ ಹಾಗೆನೇ ಅವುಗಳು 'ಇಂಜಿನ್' ಕುರಿತಾದ ವಿಷಯವನ್ನು ತಿಳಿಸುವಾಗ ಪಾರಿಭಾಷಿಕ ಪದಗಳಾಗಿಯೂ ಬಳಕೆಯಾಗುತ್ತವೆ. ಆದರೆ ಅದೇ ನಮ್ಮಲ್ಲಿ ದಿನಬಳಕೆಯ ಪದಗಳಾದ ಹೀರು, ಒತ್ತು ಅನ್ನುವುದನ್ನು ಬಿಟ್ಟು ಭುಕ್ತಿ, ಸಂಪೀಡನ ಅನ್ನುವ ಪದಗಳನ್ನು ಬಳಸಲಾಗುತ್ತದೆ.

ಹಾಗೇ ನೋಡಿದರೆ ವೈಜ್ಞಾನಿಕ ಪದಗಳು ಸಾಮಾನ್ಯ ಬಳಕೆಯ ಪದಗಳಾಗಿದ್ದಷ್ಟೂ ಒಳ್ಳೆಯದೇ. ಏಕೆಂದರೆ ಹಾಗಿದ್ದಾಗ ಕಲಿಯಬೇಕಾದ ವಿಷಯ ಬೇಗನೇ ತಿಳಿಯುತ್ತದೆ. ಇತ್ತೀಚಿನ ವರುಷಗಳಲ್ಲಿ ಮುಂಚೂಣಿಗೆ ಬಂದಿರುವ ಕಂಪ್ಯೂಟರ್ ಕ್ಷೇತ್ರದಲ್ಲಿ ಇಂತಹ ಹಲವಾರು ಇಂಗ್ಲೀಶ್ ಪದಗಳನ್ನು ಕಾಣಬಹುದು (ಉದಾ: window, save, firewall, junk, program, tree ಮುಂತಾದವು)

5. ***ಸಂಸ್ಕೃತ ಪದಗಳು ಆಗಲೇ ಬಳಕೆಯಲ್ಲಿವೆ. ಅವು ಕನ್ನಡಿಗರಿಗೆ ತಿಳಿಯುತ್ತವೆ.***

ಸಂಸ್ಕೃತ ಪದಗಳು ಹೆಚ್ಚಾಗಿ ಬರಹ ರೂಪದ ಕನ್ನಡದಲ್ಲಿ ಕಂಡುಬರುತ್ತವೆ, ಆಡುನುಡಿಯಲ್ಲಿ ಅವುಗಳ ಬಳಕೆ ಕಡಿಮೆ. ಹಿಂದಿನ ಕಾಲದಲ್ಲಿ ಕನ್ನಡ ನುಡಿಯ ಬರಹ ರೂಪ ಹೆಚ್ಚಾಗಿ ಸಾಹಿತ್ಯಕ್ಕೆ ಸಂಬಂಧಿಸಿದ ಕವಲುಗಳಲ್ಲಿ ಆಗುತ್ತಿತ್ತು (ಕತೆ, ಕಾವ್ಯ ಮುಂತಾದವು). ಕನ್ನಡ ಸಾಹಿತ್ಯದಲ್ಲಿ ಹಿಂದಿನಿಂದಲೂ ಸಂಸ್ಕೃತದ ಪ್ರಭಾವಿದ್ದುದರಿಂದ ಕನ್ನಡ ಬರಹದಲ್ಲಿ ಸಂಸ್ಕೃತ ಪದಗಳು ಕಂಡುಬರುವುದಕ್ಕೆ ಮುಖ್ಯ ಕಾರಣವಾಗಿದೆ. ಆಗೆಲ್ಲಾ ಬರಹವು ಕೆಲವೊಂದು ವರ್ಗಕ್ಕೆ, ಸಾಹಿತ್ಯದಂತಹ ಕೆಲವು ಪ್ರಕಾರಗಳಿಗೆ ಸೀಮೀತವಾಗಿದ್ದರಿಂದ ಅದರ ಪ್ರಭಾವ ಒಟ್ಟಾರೆ ನುಡಿ ಸಮುದಾಯದ ದೈನಂದಿನ ಬದುಕಿನಲ್ಲಿ ಅಷ್ಟೊಂದು ಆಗುತ್ತಿರಲಿಲ್ಲ.

ಆದರೆ ಹೊಸಗಾಲದಲ್ಲಿ ವಿಜ್ಞಾನದಂತಹ ವಿಷಯಗಳು ಸಮಾಜದ ಮೇಲೆ ತುಂಬಾ ನೇರವಾದ ಪರಿಣಾಮಗಳನ್ನು ಬೀರುತ್ತಿರುವುದರಿಂದ ಮತ್ತು ಬರಹವು ಈ ವಿಷಯಗಳನ್ನು ಹೆಚ್ಚೆಚ್ಚು ಪಸರಿಸಲು ನೆರವಾಗುವುದರಿಂದ ಆಡುನುಡಿಗೆ ಹತ್ತಿರವಾಗಿ ಬರಹವಿದ್ದರೆ, ವಿಜ್ಞಾನವು ಹೆಚ್ಚು ಜನರನ್ನು ಸುಲಭವಾಗಿ ತಲುಪಲು ಸಾಧ್ಯವಾಗುತ್ತದೆ. ಬರಹವು ಇಂದು ಸಾಹಿತ್ಯದಾಚೆಗೆ ಜನರ ಬದುಕಿಗೆ, ಅವರ ದುಡಿಮೆ, ಗಳಿಕೆ, ಏಳಿಗೆಗೆ ಸಾಧನವಾಗಿ ಬಳಕೆಯಾಗುತ್ತಿದೆ ಹಾಗಾಗಿ ಬರಹವು ಅವರ ದೈನಂದಿನ ಬದುಕಿಗೆ ಹತ್ತಿರವಾದಷ್ಟೂ ಒಳ್ಳೆಯದು.

ಭಾಷಾವಿಜ್ಞಾನದ ಪ್ರಕಾರ ಕನ್ನಡ ಮತ್ತು ಸಂಸ್ಕೃತ ನುಡಿಗಳು ಬೇರೆ ಬೇರೆ ನುಡಿ ಕುಟುಂಬಕ್ಕೆ ಸೇರಿವೆ. ಸಂಸ್ಕೃತವು ಇಂಡೋ ಯುರೋಪಿಯನ್ ನುಡಿ ಕುಟುಂಬಕ್ಕೆ ಸೇರಿದ್ದರೆ ಕನ್ನಡವು ದ್ರಾವಿಡ ನುಡಿ ಕುಟುಂಬಕ್ಕೆ ಸೇರಿದ್ದಾಗಿದೆ. ಎರಡು ಬೇರೆ ಬೇರೆ ಮೂಲ ನುಡಿಗಳಿಂದ ಕನ್ನಡ ಮತ್ತು ಸಂಸ್ಕೃತ ನುಡಿಗಳು ಬೆಳೆದು ಬಂದಿರುವುದರಿಂದ ಅವರೆಡರ ನಡುವೆ ಮೂಲದಲ್ಲಿಯೇ ಹಲವಾರು ವ್ಯತ್ಯಾಸಗಳಿವೆ ಹಾಗಾಗಿ ಸಂಸ್ಕೃತ ಪದಗಳು ಕನ್ನಡ ಬಲ್ಲವರಿಗೆ ಸಾಮಾನ್ಯವಾಗಿ ತಿಳಿಯುವುದಿಲ್ಲ. ಉದಾಹರಣೆಗೆ, ನೀರು, ಗಾಳಿ, ಬೆಂಕಿ, ಬೆಳಕು ಅನ್ನುವ ಪದಗಳ ಬದಲಾಗಿ ಜಲ, ವಾಯು, ಅಗ್ನಿ, ದಹನ, ದ್ಯುತಿ ಪದಗಳನ್ನು ಬಳಸಿದರೆ ಕನ್ನಡದ ಮಕ್ಕಳಿಗೆ ಬೇಗನೇ ತಿಳಿಯುವುದಿಲ್ಲ. ಇನ್ನೂ ಮುಂದುವರೆದು ಇಂತಹ ಪದಗಳಿಂದ ಇನ್ನಷ್ಟು ಪದಗಳನ್ನು ಕಟ್ಟಿದರೆ ಕಲಿಕೆ ಕಷ್ಟವಾಗುತ್ತಾ ಹೋಗುತ್ತದೆ. ಉದಾ: ದಹನ >> ದಹ್ಯ ವಸ್ತು, ದಹನಾನುಕೂಲಿ, ಜಲ >> ಜಲಾಂತರ, ಜಲಚರ ಮುಂತಾದ ಪದಗಳು ಬೇಗನೇ ತಿಳಿಯುವುದಿಲ್ಲ. ಅವುಗಳ ಬದಲಾಗಿ ಉರಿಯುವ ವಸ್ತು, ನೀರೊಳಗಿನ, ನೀರಿನಲ್ಲಿರುವ ಮುಂತಾದ ಪದಗಳು ಬೇಗನೇ ತಿಳಿಯುತ್ತವೆ.

6. ***ಪಾರಿಭಾಷಿಕ ಪದಗಳು ಕಠಿಣವಾಗಿಯೇ ಇರುತ್ತವೆ, ಮಕ್ಕಳು ಓದಿನಲ್ಲಿ ಶ್ರಮವಹಿಸಬೇಕಷ್ಟೇ. ಶ್ರಮವಹಿಸಿ ಪದಗಳನ್ನು ಓದುತ್ತಾ ಹೋದಂತೆ ಅವು ಅವರಿಗೆ ಪರಿಚಯವಾಗುತ್ತವೆ ಮತ್ತು ಇದರಿಂದ ಮಕ್ಕಳ ಶಬ್ದ ಭಂಡಾರ ಹೆಚ್ಚುತ್ತದೆ.***

ವಿಜ್ಞಾನ ಕಲಿಕೆಯ ಮುಖ್ಯ ಉದ್ದೇಶವೆಂದರೆ ವಿಷಯಗಳ ತಿಳುವಳಿಕೆಯೇ ಹೊರತು ಮಕ್ಕಳಿಗೆ ಹೊಸ ಹೊಸ ಪದಗಳನ್ನು ಪರಿಚಯ ಮಾಡಿಸಿ ಅವರ ಶಬ್ದ ಭಂಡಾರವನ್ನು ಹೆಚ್ಚಿಸುವುದಲ್ಲ. ಮಕ್ಕಳು ಪದಗಳನ್ನು ತಿಳಿದುಕೊಳ್ಳಲೆಂದೇ ಹೆಚ್ಚೆಚ್ಚು ಶ್ರಮವಹಿಸಬೇಕಾಗುವ ಪರಿಸ್ಥಿತಿ ಉಂಟಾದರೆ, ಪದಗಳ ಮೂಲಕ ಅರಿತುಕೊಳ್ಳಬೇಕಾದ ವಿಷಯದ ಅರಿವು ದೂರವಾಗುತ್ತದೆ. ಆಗ ವಿಜ್ಞಾನ ಕಲಿಕೆಯ ಮುಖ್ಯ ಉದ್ದೇಶವೇ ಈಡೇರುವುದಿಲ್ಲ. ಉದಾಹರಣೆಗೆ, ಬೆನ್ನುಮೂಳೆಯಿರುವ ಮತ್ತು ಬೆನ್ನುಮೂಳೆಯಿರದ ಪ್ರಾಣಿಗಳು ಅನ್ನುವ ಬದಲಾಗಿ ಇಂದಿನ ಪಠ್ಯಪುಸ್ತಕಗಳಲ್ಲಿ ಕಶೇರುಕ ಮತ್ತು ಅಕಶೇರುಕ ಪ್ರಾಣಿಗಳು ಅಂತಾ ಬಳಸಲಾಗಿದೆ. ಹೀಗೆ ಮಾಡಿದಾಗ ಮಕ್ಕಳು ಮೊದಲಿಗೆ ಕಶೇರುಕ ಮತ್ತು

ಅಕಶೇರುಕ ಎಂಬ ಪದಗಳನ್ನು ಕಂಠಪಾಠ ಮಾಡಬೇಕಾಗುತ್ತದೆ. ಆಮೇಲೆ ಯಾವುದು ಇದರಲ್ಲಿ ಬೆನ್ನುಮೂಳೆ ಇರುವುದಕ್ಕೆ ಮತ್ತು ಯಾವುದು ಇಲ್ಲದಿರುವುದಕ್ಕೆ ಎಂದು ನೆನಪಿಟ್ಟುಕೊಳ್ಳಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಹಲವಾರು ಮಕ್ಕಳು ಗೊಂದಲಕ್ಕೀಡಾಗುತ್ತಾರೆ. ಅದೇ ಬೆನ್ನುಮೂಳೆಯಿರದ ಮತ್ತು ಬೆನ್ನುಮೂಳೆಯಿಲ್ಲದ ಅನ್ನುವ ಪದಗಳಲ್ಲಿ ಈ ಗೊಂದಲವಾಗುವುದಿಲ್ಲ ಏಕೆಂದರೆ ಈ ಪದಗಳು ಅವರ ಪರಿಸರಕ್ಕೆ ಹತ್ತಿರವಾದ ಪದಗಳಾಗಿವೆ. ಇಂತಹ ಸುಲಭವಾದ ಪದಗಳನ್ನು ಬಳಸುವುದರಿಂದ ಪಾಠಗಳಲ್ಲಿ ಇಂದು ಕೇಳಲಾಗುವ 'ಕಶೇರುಕ ಮತ್ತು ಅಕಶೇರುಕ ಪ್ರಾಣಿಗಳು ಎಂದರೇನು?' ಎಂಬಂತಹ ಅಗತ್ಯವಿಲ್ಲದ ಪ್ರಶ್ನೆಗಳನ್ನೂ ಕೈಬಿಡಬಹುದು ಮತ್ತು ಅದರ ಬದಲಾಗಿ ನೇರವಾಗಿ ಬೆನ್ನುಮೂಳೆಯಿರುವ ಮತ್ತು ಬೆನ್ನುಮೂಳೆಯಿರದ ಪ್ರಾಣಿಗಳು ಯಾವುವು? ಅವುಗಳ ಗುಣಗಳೇನು?' ಎಂಬಂತಹ ಪ್ರಶ್ನೆಗಳೊಂದಿಗೆ ಮುಂದಿನ ಹಂತದ ಕಲಿಕೆಯತ್ತ ಸಾಗಬಹುದು.

7. ***ಇಂಗ್ಲೀಶ್ ಪದಗಳನ್ನು ಕನ್ನಡ ಲಿಪಿಯಲ್ಲಿ ಹಾಗೆಯೇ ಉಳಿಸಿಕೊಳ್ಳಬಹುದು. ಉನ್ನತ ಕಲಿಕೆ ಇಂಗ್ಲೀಶ್‌ನಲ್ಲೇ ಇರುವುದರಿಂದ ಹೀಗೆ ಮಾಡಬೇಕಾಗುತ್ತದೆ ಎಂಬ ಅನಿಸಿಕೆ.***

ಉನ್ನತ ಕಲಿಕೆ ಇಂದು ಇಂಗ್ಲೀಶ್‌ನಲ್ಲಿ ನಡೆಯುತ್ತಿರುವುದರಿಂದ ಮೇಲ್ನೋಟಕ್ಕೆ ಇದು ಸರಿ ಅನಿಸಬಹುದು. ಆದರೆ ಹೀಗೆ ಮಾಡುವುದರಿಂದ ಪದಗಳು ಬರೀ ಪದಗಳಾಗಿಯೇ ಉಳಿದು ಅವುಗಳು ಹೊಮ್ಮಿಸುವ ಅರಿವು ಮಕ್ಕಳಿಗೆ ಎಟಕುವುದಿಲ್ಲ. ಈ ವರದಿಯಲ್ಲಿ ಉದಾಹರಣೆ ನೀಡಿದಂತೆ ಯುಸ್ಟೇಶಿಯನ್, ಎಂಡೋಲಿಂಫ್ ಪದಗಳಿಗಿಂತ ಕಿವಿಗೊಳವೆ, ಕಿವಿರಸದಂತಹ ಪದಗಳು ಮಕ್ಕಳಿಗೆ ಹೆಚ್ಚಿನ ಅರಿವನ್ನು ಮೂಡಿಸುವ ಶಕ್ತಿಯನ್ನು ಹೊಂದಿವೆ.

ಇಂಗ್ಲೀಶ್‌ನಲ್ಲಿರುವ ಇಂದಿನ ಉನ್ನತ ಕಲಿಕೆಗೆ ನೆರವಾಗುವಂತೆ ನೋಡಿಕೊಳ್ಳಲು ಕನ್ನಡ ಪದಗಳ ಜತೆಯಲ್ಲಿ ಇಂಗ್ಲೀಶ್ ಪದಗಳ ಪರಿಚಯ ಮಾಡಿಸಬಹುದು. ಇದನ್ನು ಕನ್ನಡ ಪದಗಳ ಜತೆಗೆ ಇಂಗ್ಲೀಶ್ ಪದಗಳನ್ನು ಆವರಣದಲ್ಲಿ ಬರೆಯುವ ಮೂಲಕವಾದರೂ ಆಗಿರಬಹುದು ಇಲ್ಲವೇ ಪಾಠದ ಕೊನೆಯಲ್ಲಿ ಕನ್ನಡ ಮತ್ತು ಇಂಗ್ಲೀಶ್ ಪದಗಳ ಪಟ್ಟಿಯೊಂದನ್ನು ಮಾಹಿತಿಗಾಗಿ ನೀಡಬಹುದು.

ಇನ್ನೊಂದು ಗಮನಿಸಬೇಕಾದ ವಿಷಯವೆಂದರೆ ಕಲಿಕೆಯ ಮೊದಲ ಹಂತದಲ್ಲಿ ಕನ್ನಡ ಪದಗಳನ್ನು ಕಟ್ಟುತ್ತಾ, ಬಳಸುತ್ತಾ ಹೋಗುವುದರಿಂದ ವಿಜ್ಞಾನದ ಉನ್ನತ ಕಲಿಕೆಯನ್ನೂ ಮುಂದೊಂದು ದಿನ ಕನ್ನಡದಲ್ಲಿ ತರಲು ಸಾಧ್ಯವಾಗುತ್ತದೆ.

8. **ಸುಲಭವಾದ ಪಾರಿಭಾಷಿಕ ಪದಗಳನ್ನು ಜಾರಿಗೆ ತರುವ ಅಗತ್ಯವಿದೆ ಆದರೆ ಅದನ್ನು ಜಾರಿಗೆ ತರುವುದು ಹೇಗೆ? ಪಠ್ಯಪುಸ್ತಕಗಳನ್ನು ಒಮ್ಮೆಲೇ ಬದಲಿಸಿದರೆ ಗೊಂದಲವಾಗುವುದಿಲ್ಲವೇ?**

ಚರ್ಚೆಯಲ್ಲಿ ಪಾಲ್ಗೊಂಡ ಹಲವು ಮಂದಿಯ ಪ್ರಶ್ನೆ ಇದಾಗಿತ್ತು. ಸುಲಭವಾದ ಪಾರಿಭಾಷಿಕ ಪದಗಳನ್ನು ಜಾರಿಗೆ ತರುವ ಕೆಲಸವನ್ನು ಒಮ್ಮೆಲೇ ಮಾಡಬೇಕಂತಿಲ್ಲ. ಈ ಕೆಲಸವನ್ನು ಹಂತ ಹಂತವಾಗಿ ಮಾಡಬಹುದು. ಈ ಹಂತಗಳು ಕೆಳಗಿನಂತಿರಬಹುದು.

- ಮೊದಲಿಗೆ ಈ ಅಧ್ಯಯನದಲ್ಲಿ ಮಾಡಿದಂತೆ ಪಠ್ಯಪುಸ್ತಕಗಳಲ್ಲಿರುವ ತೊಡಕಾದ ಪದಗಳಿಗೆ ಸುಲಭವಾದ ಪದಗಳನ್ನು ಕಟ್ಟುವ, ಅವುಗಳ ಕುರಿತು ಚರ್ಚಿಸಿ ಒಮ್ಮತಕ್ಕೆ ಬರುವ ಕೆಲಸವನ್ನು ಮಾಡಬಹುದು.

- ಈಗಿರುವ ಪದಗಳ ಬದಲಾಗಿ ಹೊಸದಾಗಿ ಕಟ್ಟಿದ ಪದಗಳಿಂದಾಗಿ ಮಕ್ಕಳಿಗೆ ಉಪಯೋಗವಾಗುತ್ತಿದೆಯೇ? ಎಲ್ಲಾದರೂ ಗೊಂದಲವಾಗುತ್ತಿದೆಯೇ? ಮುಂತಾದ ವಿಷಯಗಳನ್ನು ಶಾಲೆಯಲ್ಲಿ ಪ್ರಯೋಗದ ಮೂಲಕ ತಿಳಿದುಕೊಳ್ಳಬಹುದು. ಇಂತಹ ಪ್ರಯೋಗಗಳು ಹಲವು ಶಾಲೆಗಳಲ್ಲಿ ನಡೆದರೆ ಒಳ್ಳೆಯದು.

- ಹೊಸದಾಗಿ ಕಟ್ಟಿದ ಪದಗಳನ್ನು ಮೊದಲಿಗೆ 1 ರಿಂದ 5 ತರಗತಿವರೆಗಿನ ಪಠ್ಯಪುಸ್ತಕಗಳಲ್ಲಿ ಬಳಸಬಹುದು. ಆಮೇಲೆ ಮುಂದಿನ ಹಂತದ ತರಗತಿಯಲ್ಲಿ ಇವುಗಳನ್ನು ಜಾರಿಗೆ ತರಬಹುದು.

- ಶಿಕ್ಷಕರಿಗೆ ಇಲ್ಲವೇ ಹಳೆಯ ಪದಗಳನ್ನು ಓದುತ್ತಾ ಬಂದಿರುವ ಮಕ್ಕಳಿಗೆ ಅನುಕೂಲವಾಗಲು ಈಗಿರುವ ಪದಗಳನ್ನು ಆವರಣದಲ್ಲಿ ಇಲ್ಲವೇ ಪಾಠದ ಕೊನೆಗೆ ಮಾಹಿತಿಗಾಗಿ ಕೆಲವು ವರುಷ ಮುಂದುವರೆಸಬಹುದು.

ಸಾರಾಂಶ:

ಕನ್ನಡ ಮಾಧ್ಯಮದ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಬಳಸಿರುವ ಪಾರಿಭಾಷಿಕ ಪದಗಳ ಕುರಿತು ನಡೆದ ಈ ಅಧ್ಯಯನದಲ್ಲಿ ಕೆಳಗಿನ ಅಂಶಗಳು ಕಂಡುಬಂದವು,

- ಪಾರಿಭಾಷಿಕ ಪದಗಳಲ್ಲಿ ಹೆಚ್ಚಿನವು ಕನ್ನಡದ ಪರಿಸರದಿಂದ ದೂರವಿರುವ, ಮಕ್ಕಳಿಗೆ ತೊಡಕೆನಿಸಬಹುದಾದ ಪದಗಳಾಗಿವೆ. ಇಂತಹ ಪದಗಳಿಂದಾಗಿ ಮಕ್ಕಳು ಪದಗಳ ಕಂಠಪಾಠಕ್ಕೆ ಮೊರೆಹೋಗಿ, ಒಟ್ಟಾರೆ ವಿಜ್ಞಾನ ಕಲಿಕೆಯು ಅವರಿಗೆ ಹೊರೆಯಾಗುವಂತಿದೆ.

- ಈಗ ಬಳಸಿರುವ ಪಾರಿಭಾಷಿಕ ಪದಗಳಿಗೆ ಸುಲಭವೆನಿಸುವ ಪದಗಳನ್ನು ಕಟ್ಟಲು ಸಾಧ್ಯವಿದೆ. ಸುಲಭವಾದ ಪದಗಳನ್ನು ಬಳಸಿದಾಗ ಹೇಳುತ್ತಿರುವ ವಿಷಯ ಮಕ್ಕಳಿಗೆ ಹೆಚ್ಚು ಹತ್ತಿರವೆನಿಸಿ, ವಿಜ್ಞಾನ ವಿಷಯದಲ್ಲಿ ಅವರಿಗೆ ಆಸಕ್ತಿ ಹುಟ್ಟುವ ಸಾಧ್ಯತೆ ಹೆಚ್ಚುತ್ತದೆ.

- ಸುಲಭವಾದ ಪದಗಳನ್ನು ಪಠ್ಯಪುಸ್ತಕದಲ್ಲಿ ಬಳಸಿದಾಗ ವಿಜ್ಞಾನ ಕಲಿಸುವ ಶಿಕ್ಷಕರಿಗೂ ಸುಲಭವಾಗುತ್ತದೆ. ಏಕೆಂದರೆ ಈಗಿನ ಪಠ್ಯಪುಸ್ತಕದಲ್ಲಿರುವ ತೊಡಕಾದ ಪದಗಳನ್ನು ವಿವರಿಸಲು ಶಿಕ್ಷಕರಿಗೆ ಹೆಚ್ಚು ಸಮಯ ತಗಲುತ್ತಿದೆ. ಹಲವಾರು ಕಡೆ ಪದಗಳು ಎಷ್ಟು ಸಲ ಹೇಳಿದರೂ ಮಕ್ಕಳಿಗೆ ತಿಳಿಯದಿದ್ದಾಗ, 'ಇಷ್ಟೇ ತಿಳಿಸುವುದು ಸಾಧ್ಯ' ಎನ್ನುತ್ತಾ ಮುಂದಿನ ಹಂತಕ್ಕೆ ಶಿಕ್ಷಕರು ಸಾಗುವ ಪರಿಸ್ಥಿತಿ ಇದೆಯೆಂದು ಚರ್ಚೆಯಲ್ಲಿ ಅವರೇ ಅನಿಸಿಕೆ ಹಂಚಿಕೊಂಡಿದ್ದರು.

- ಸುಲಭವಾದ ಪಾರಿಭಾಷಿಕ ಪದಕಟ್ಟಣೆಯ ಕೆಲಸದಲ್ಲಿ ವಿಜ್ಞಾನ ಕ್ಷೇತ್ರದಲ್ಲಿರುವವರು, ಶಿಕ್ಷಕರು, ಈ ನಿಟ್ಟಿನಲ್ಲಿ ಆಸಕ್ತಿ ಹೊಂದಿರುವವರು ತೊಡಗಿಕೊಳ್ಳಬಹುದು. ಶಿಕ್ಷಣ ಕ್ಷೇತ್ರದಲ್ಲಿ ಈ ಕುರಿತು ನಿರಂತರವಾಗಿ ಕೆಲವು ವರುಷಗಳ ಕೆಲಸ ನಡೆದರೆ ಬದಲಾವಣೆ ತರಲು ಸಾಧ್ಯವಾಗಬಲ್ಲದು. ಈ ಮೂಲಕ ಕನ್ನಡ ನಾಡಿನ ಮಕ್ಕಳ ಭವಿಷ್ಯ ಬೆಳಗಬಲ್ಲದು.

ಈ ಅಧ್ಯಯನದ ಅಂಗವಾಗಿ 5, 8 ಮತ್ತು 10 ನೇ ತರಗತಿಯ ತೊಡಕೆನಿಸುವ ಪಾರಿಭಾಷಿಕ ಪದಗಳಿಗೆ ಬದಲಿಗೆ ಬಳಸಬಹುದಾದ ಪದಗಳನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ. ಈ ಮೊದಲು ತಿಳಿಸಿದಂತೆ ಇಲ್ಲಿ ನೀಡಿದ ಪದಗಳಲ್ಲಿ ತಿದ್ದುಪಡಿಗಳಿದ್ದರೆ ಸರಿಪಡಿಸಿಕೊಳ್ಳಬಹುದು. ಇನ್ನೂ ಸರಿಯಾಗಿರುವ, ಸುಲಭ ಪದಗಳಿದ್ದರೆ ಅವುಗಳನ್ನು ಸಂಬಂಧಪಟ್ಟವರು ಬಳಸಬಹುದು. ಹಾಗೆನೇ ಪದಕಟ್ಟಣೆಯ ಈ ಕೆಲಸವನ್ನು ವ್ಯವಸ್ಥಿತವಾಗಿ ಮುಂದುವರಿಸಬಹುದು.

5 ನೇ ತರಗತಿ - ವಿಜ್ಞಾನ ಪಠ್ಯಪುಸ್ತಕ 2014-15

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
1	1	ಚಲನೆ	ನೇರ ಚಲನೆ	Linear Motion	ನೇರ ಸಾಗುವಿಕೆ
2	1	ಚಲನೆ	ವಕ್ರ ಚಲನೆ	Curvilinear Motion	ಬಾಗು ಸಾಗುವಿಕೆ
3	1	ಚಲನೆ	ಭ್ರಮಣ ಚಲನೆ	Rotatory Motion	ತಿರುಗುವಿಕೆ
4	1	ಚಲನೆ	ಆಂದೋಲನ ಚಲನೆ	Oscillatory Motion	ತೂಗುವಿಕೆ
5	1	ಚಲನೆ	ವೃತ್ತೀಯ ಚಲನೆ	Circular Motion	ಸುತ್ತುವಿಕೆ
6	1	ಚಲನೆ	ನಿಶ್ಚಲ ಸ್ಥಿತಿ	State of Rest	ನಿಂತ ಸ್ಥಿತಿ
7	1	ಚಲನೆ	ವಕ್ರ ರೇಖೆ	curved line	ಬಾಗು ಗೆರೆ
8	1	ಚಲನೆ	ಪಾರದರ್ಶಕ	Transparent	ತೂರುನೋಟದ
9	1	ಚಲನೆ	ಅಕ್ಷ	Axis	ನಡುಗೆರೆ
10	1	ಚಲನೆ	ವೃತ್ತೀಯ ಪಥ	orbital path	ಸುತ್ತು ಹಾದಿ
11	2	ಬಲ ಮತ್ತು ಕೆಲಸ	ಗುರುತ್ವಾಕರ್ಷಣ ಬಲ	Gravitational Force	ರಾಶಿಸೆಳೆತದ ಬಲ
12	2	ಬಲ ಮತ್ತು ಕೆಲಸ	ಘರ್ಷಣ ಬಲ	Frictional Force	ಉಜ್ಜುವಿಕೆಯ ಬಲ
13	2	ಬಲ ಮತ್ತು ಕೆಲಸ	ಅಯಸ್ಕಾಂತ	Magnet	ಸೆಳೆಗಲ್ಲು
14	2	ಬಲ ಮತ್ತು ಕೆಲಸ	ಅಯಸ್ಕಾಂತೀಯ ಬಲ	Magnetic Force	ಸೆಳೆಗಲ್ಲಿನ ಬಲ
15	2	ಬಲ ಮತ್ತು ಕೆಲಸ	ಸ್ಥಾಯೀ ವಿದ್ಯುತ್ ಬಲ	Electrostatic Force	ನಿಲುವಿದ್ಯುತ್ ಬಲ
16	2	ಬಲ ಮತ್ತು ಕೆಲಸ	ಚರವಿದ್ಯುತ್ ಬಲ	Electromotive Force	ನಡೆವಿದ್ಯುತ್ ಬಲ
17	2	ಬಲ ಮತ್ತು ಕೆಲಸ	ಸ್ಥಿತಿಸ್ಥಾಪಕ ಬಲ	Elastic Force	ಹಿನ್ನೆಳೆತದ ಬಲ
18	2	ಬಲ ಮತ್ತು ಕೆಲಸ	ಧ್ರುವ	Pole (as in pole of a magnet)	ಬದಿ
19	4	ಶಕ್ತಿ	ಸ್ನಾಯು ಶಕ್ತಿ	Muscular Energy	ಕಂಡದ ಶಕ್ತಿ
20	4	ಶಕ್ತಿ	ಚಲನ ಶಕ್ತಿ	Kinetic Energy	ಕದಲಿಕೆಯ ಶಕ್ತಿ
21	4	ಶಕ್ತಿ	ಪ್ರಚ್ಛನ್ನ ಶಕ್ತಿ	Potential Energy	ಅಡಕ ಶಕ್ತಿ
22	4	ಶಕ್ತಿ	ಉಷ್ಣ ಶಕ್ತಿ	Heat Energy	ಕಾವಿನ ಶಕ್ತಿ
23	4	ಶಕ್ತಿ	ಉಷ್ಣ ವಿದ್ಯುತ್ ಸ್ಥಾವರ	Thermal Power Stations	ಕಾವಿನ ವಿದ್ಯುತ್ ನೆಲೆ
24	4	ಶಕ್ತಿ	ಇಂಧನ	Fuel	ಉರುವಲು
25	4	ಶಕ್ತಿ	ಪ್ರನಾಳ	Test tube	ಒರೆಗೊಳವೆ

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
26	4	ಶಕ್ತಿ	ಸೌರ ಶಕ್ತಿ	Solar Energy	ಬಿಸಿಲಿನ ಶಕ್ತಿ
27	4	ಶಕ್ತಿ	ದ್ಯುತಿಸಂಶ್ಲೇಷಣೆ	Photosynthesis	ಬೆಳಕಿನ ಸಂಶ್ಲೇಷಣೆ
28	4	ಶಕ್ತಿ	ಸೌರ ಒಲೆ	Solar cooker	ಬಿಸಿಲಿನ ಒಲೆ
29	4	ಶಕ್ತಿ	ಸೌರ ಜಲತಾಪಕ	Solar Water Heater	ಬಿಸಿಲಿನ ನೀರು ಕಾವುಗೆ
30	4	ಶಕ್ತಿ	ಪವನ ಶಕ್ತಿ	Wind Energy	ಗಾಳಿಯ ಶಕ್ತಿ
31	4	ಶಕ್ತಿ	ಟರ್ಬೈನ್	turbine	ಬೀಸುಗಾಲಿ
32	4	ಶಕ್ತಿ	ಚಂಡಮಾರುತ	cyclone	ಸುಂಟರಗಾಳಿ
33	4	ಶಕ್ತಿ	ಜಲದ ಸಂಗ್ರಹಿತ ಶಕ್ತಿ	Water's stored energy	ನೀರಿನ ಕೂಡಿಟ್ಟ ಶಕ್ತಿ
34	4	ಶಕ್ತಿ	ಜಲವಿದ್ಯುತ್ ಉತ್ಪಾದನಾ ಸ್ಥಾವರ	Hydro-electric power station	ನೀರಿನ ವಿದ್ಯುತ್ ಉತ್ಪಾದನೆಯ ನೆಲೆ
35	4	ಶಕ್ತಿ	ಜೈವಿಕ ಶಕ್ತಿ	Bio energy	ಜೀವದ ಶಕ್ತಿ
36	4	ಶಕ್ತಿ	ಜೈವಿಕೆ ಅನಿಲ	gobar gas	ಜೀವದ ಅನಿಲ
37	4	ಶಕ್ತಿ	ವಿದ್ಯುತ್ ಕೋಷ್ಟಕ	electric cell	ವಿದ್ಯುತ್ ಗೂಡು
38	4	ಶಕ್ತಿ	ಶಕ್ತಿ ಸಂರಕ್ಷಣಾ ನಿಯಮ	Law of conservation of energy	ಶಕ್ತಿಯ ಕಾಯ್ದುಕೊಳ್ಳುವಿಕೆಯ ನಿಯಮ
39	4	ಶಕ್ತಿ	ಮಾನ	unit of measurement	ಅಳತೆಗೋಲು
40	5	ವಿದ್ಯುಚ್ಛಕ್ತಿ	ವಿದ್ಯುಚ್ಛಕ್ತಿ	Electricity	ವಿದ್ಯುತ್ ಶಕ್ತಿ
41	5	ವಿದ್ಯುಚ್ಛಕ್ತಿ	ಪ್ರವಾಹ	Current	ಹರಿವು
42	5	ವಿದ್ಯುಚ್ಛಕ್ತಿ	ಕೋಶ	Cell	ಗೂಡು
43	5	ವಿದ್ಯುಚ್ಛಕ್ತಿ	ಆಕರ್ಷಣೆ	Attraction	ಸೆಳೆತ
44	5	ವಿದ್ಯುಚ್ಛಕ್ತಿ	ವಿಕರ್ಷಣೆ	Repel	ತಳ್ಳುವಿಕೆ
45	5	ವಿದ್ಯುಚ್ಛಕ್ತಿ	ವಿದ್ಯುತ್ಕಣ	Charge	ಹುರುಪು
46	5	ವಿದ್ಯುಚ್ಛಕ್ತಿ	ಧನ ವಿದ್ಯುತ್ಕಣ	positive charge	ಕೂಡು ಹುರುಪು
47	5	ವಿದ್ಯುಚ್ಛಕ್ತಿ	ಋಣ ವಿದ್ಯುತ್ಕಣ	negative charge	ಕಳೆ ಹುರುಪು
48	5	ವಿದ್ಯುಚ್ಛಕ್ತಿ	ವಿದ್ಯುದ್ದಾವೇಶ / ವಿದ್ಯುದಾವಿಷ್ಟ ಕಣ	electric charge	ವಿದ್ಯುತ್ ಹುರುಪು
49	5	ವಿದ್ಯುಚ್ಛಕ್ತಿ	ಸಜಾತಿಯ ವಿದ್ಯುದ್ದಾವೇಶ	like charge	ಒಂದೇ ಗುರುತಿನ ಹುರುಪು
50	5	ವಿದ್ಯುಚ್ಛಕ್ತಿ	ವಿಜಾತಿಯ ವಿದ್ಯುದ್ದಾವೇಶ	opposite charge	ಬೇರೆ ಗುರುತಿನ ಹುರುಪು

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
51	5	ವಿದ್ಯುಚ್ಛಕ್ತಿ	ವಿಜಾತಿಯ ವಿದ್ಯುದ್ದಾವೇಶ	opposite charge	ಬೇರೆ ಗುರುತಿನ ಹುರುಪು
52	5	ವಿದ್ಯುಚ್ಛಕ್ತಿ	ಅನ್ವೇಷಣೆ	invention	ಕಂಡುಹಿಡಿಯುವಿಕೆ
53	5	ವಿದ್ಯುಚ್ಛಕ್ತಿ	ಕಾರ್ಯ ನಿರ್ವಹಣೆ	working	ಕೆಲಸ ಮಾಡುವಿಕೆ
54	5	ವಿದ್ಯುಚ್ಛಕ್ತಿ	ವಿದ್ಯುತ್ ಜನಕ	generator	ವಿದ್ಯುತ್ ಹುಟ್ಟುಕ
55	5	ವಿದ್ಯುಚ್ಛಕ್ತಿ	ಧ್ರುವ	pole (electricity)	ತುದಿ
56	5	ವಿದ್ಯುಚ್ಛಕ್ತಿ	ಸಾಪೇಕ್ಷ		ಹೆಚ್ಚಿರುವ
57	5	ವಿದ್ಯುಚ್ಛಕ್ತಿ	ಋಣಾಗ್ರ	cathode	ಕಳೆತುದಿ
58	5	ವಿದ್ಯುಚ್ಛಕ್ತಿ	ಧನಾಗ್ರ	anode	ಕೂಡತುದಿ
59	5	ವಿದ್ಯುಚ್ಛಕ್ತಿ	ವಿದ್ಯುತ್ ಕೋಶ	electric cell	ವಿದ್ಯುತ್ ಗೂಡು
60	5	ವಿದ್ಯುಚ್ಛಕ್ತಿ	ವಾಹಕ	conductor	ಬಿಡುವೆ
61	5	ವಿದ್ಯುಚ್ಛಕ್ತಿ	ಅವಾಹಕ	insulator	ತಡೆವೆ
62	5	ವಿದ್ಯುಚ್ಛಕ್ತಿ	ವಿದ್ಯುತ್ ಸ್ಥಾವರ	power plant	ವಿದ್ಯುತ್ ನೆಲೆ
63	5	ವಿದ್ಯುಚ್ಛಕ್ತಿ	ಆಕರ	source	ಸೆಲೆ
64	5	ವಿದ್ಯುಚ್ಛಕ್ತಿ	ಪರಿವರ್ತನೆ	conversion	ಬದಲಿಸುವಿಕೆ / ಬದಲಾವಣೆ
65	5	ವಿದ್ಯುಚ್ಛಕ್ತಿ	ಶುಷ್ಕ ಕೋಶ	dry cell	ಒಣ ಗೂಡು
66	5	ವಿದ್ಯುಚ್ಛಕ್ತಿ	ಮೀಡಿಯಮ್ ಗಾತ್ರದ	medium size	ನಡುಗಾತ್ರದ
67	5	ವಿದ್ಯುಚ್ಛಕ್ತಿ	ಪ್ರಧಾನ ಕೋಶಗಳು	Primary cells	ಒಂಬಳಕೆಯ ಗೂಡುಗಳು
68	5	ವಿದ್ಯುಚ್ಛಕ್ತಿ	ಆಧೀನ ಕೋಶಗಳು	secondary cells	ಮರುಬಳಕೆಯ ಗೂಡುಗಳು
69	5	ವಿದ್ಯುಚ್ಛಕ್ತಿ	ರೀಚಾರ್ಜ್	recharge	ಹುರುಪಿಸು
70	5	ವಿದ್ಯುಚ್ಛಕ್ತಿ	ವಿಕ್ಷೀಸಿ	view	ನೋಡಿ
71	5	ವಿದ್ಯುಚ್ಛಕ್ತಿ	ವಿದ್ಯುದಾಗ್ರ	electric pole	ವಿದ್ಯುತ್ ತುದಿ
72	5	ವಿದ್ಯುಚ್ಛಕ್ತಿ	ವಿದ್ಯುದ್ವಿಭಾಜಕ	electrolyte	ವಿದ್ಯುದ್ದೊಡೆಯುಕ
73	5	ವಿದ್ಯುಚ್ಛಕ್ತಿ	ದ್ರವ ನಿರೋಧಕ	fluid resistant	ದ್ರವ ತಡೆಯುಕ
74	6	ಸೌರವ್ಯೂಹ	ಸೌರವ್ಯೂಹ	Solar System	ಸೂರ್ಯ ಏರ್ಪಾಡು
75	6	ಸೌರವ್ಯೂಹ	ಭೂಕೇಂದ್ರಿತ	Geocentric	ಭೂಮಿ ನಡುವಿರುವ
76	6	ಸೌರವ್ಯೂಹ	ಸೌರಕೇಂದ್ರಿತ	Heliocentric	ಸೂರ್ಯ ನಡುವಿರುವ
77	6	ಸೌರವ್ಯೂಹ	ಕ್ಷುದ್ರಗ್ರಹ	Asteroid	ಕಿರುಕಾಯ
78	6	ಸೌರವ್ಯೂಹ	ಉಲ್ಕೆ	meteor	ಬೀಳ್ಚುಕ್ಕಿ

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
79	6	ಸೌರವ್ಯೂಹ	ಧೂಮಕೇತು	comet	ಬಾಲಚುಕ್ಕಿ
80	6	ಸೌರವ್ಯೂಹ	ತೇಜೋಮಂಡಲ	photosphere	ಬೆಳಕುಗೋಳ
81	6	ಸೌರವ್ಯೂಹ	ವರ್ಣಮಂಡಲ	Chromosphere	ಬಣ್ಣಗೋಳ
82	6	ಸೌರವ್ಯೂಹ	ಕರೋನಾ	corona	ಹೊಳಪುಗೋಳ
83	6	ಸೌರವ್ಯೂಹ	ಕುಬ್ಜಗ್ರಹ	dwarf planet	ಕುಳ್ಳಗ್ರಹ / ಹುಸಿಗ್ರಹ
84	6	ಸೌರವ್ಯೂಹ	ಜ್ವಾಲಾಮುಖಿ	volcano	ಉರಿಬೆಟ್ಟ
85	6	ಸೌರವ್ಯೂಹ	ಶಾಖ	heat	ಕಾವು
86	6	ಸೌರವ್ಯೂಹ	ಪ್ರಕಾಶಮಾನ	Shine	ಹೊಳಪು

8 ನೇ ತರಗತಿ - ವಿಜ್ಞಾನ ಪಠ್ಯಪುಸ್ತಕ 2014-15

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
1	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ನೈಸರ್ಗಿಕ ಸಂಪನ್ಮೂಲಗಳು	natural resources	ನಿಸರ್ಗದ ಸಂಪನ್ಮೂಲಗಳು
2	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಜೈವಿಕ	living	ಜೀವದ
3	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಅಜೈವಿಕ (ಸಂಪನ್ಮೂಲ, ಮೂಲದ ವಸ್ತು)	non-living	ಜೀವದಲ್ಲದ, ಜೀವವಿಲ್ಲದ
4	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ನವೀಕರಿಸಲಾಗದ (ಸಂಪನ್ಮೂಲಗಳು)	renewable	ಮರುಪಡೆಯಲಾಗದ / ಹೊಸದಿಸಲಾಗದ
5	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ವನ್ಯ ಜೀವಿಗಳು	wild life	ಕಾಡು ಜೀವಿಗಳು
6	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಇಂಧನ	fuel	ಉರುವಲು
7	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಪರಿಮಿತಿಕಾರಕ ಅಂಶ	limiting factor	ಮಿತಿಗೊಳಿಸುವ ಅಂಶ
8	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಉಷ್ಣ ವಿನಿಮಯ ಪ್ರಕ್ರಿಯೆ	heat exchange process	ಕಾವು ಹರಿವ ಪ್ರಕ್ರಿಯೆ
9	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಜಲಾನಯನಗಳು	watershed	ಅಚ್ಚುಕಟ್ಟು ಪ್ರದೇಶ
10	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಲವಣೀಕರಣ	salination	ಉಪ್ಪಿಸುವಿಕೆ, ಉಪ್ಪಾಗುವಿಕೆ
11	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಶಿಥಿಲೀಕರಣ	weathering	ಕಂದುವಿಕೆ
12	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಜಲಚಕ್ರ	water cycle	ನೀರುಚಕ್ರ, ನೀರಿನಚಕ್ರ
13	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಅರಣ್ಯೀಕರಣ	forestation	ಕಾಡಾಗಿಸುವಿಕೆ
14	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಸಸ್ಯೋದ್ಯಾನ	botanical garden	ಗಿಡಗಳ ತೋಟ, ಸಸ್ಯ ಉದ್ಯಾನ

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
15	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಪಳೆಯುಳಿಕೆ ಇಂಧನಗಳು	fossil fuels	ಪಳಿಯುಳಿಕೆ ಉರುವಲುಗಳು
16	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ದ್ಯುತಿಸಂಶ್ಲೇಷಣೆ	photosynthesis	ಬೆಳಕಿನ ಸಂಶ್ಲೇಷಣೆ, ಬೆಳಕಿನ ಹಮ್ಮುಗೆ
17	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ನೈಸರ್ಗಿಕ ಅನಿಲ	natural gas	ನಿಸರ್ಗದ ಅನಿಲ
18	1	ನಮ್ಮ ನೈಸರ್ಗಿಕ ಸಂಪನ್ಮೂಲಗಳು	ಭೂಗರ್ಭ ಪ್ರಕ್ರಿಯೆಗಳು	Earth's geological process	ಭೂಮಿಯೊಳಗಿನ ಪ್ರಕ್ರಿಯೆಗಳು, ಭೂಮಿಯಾಳದ ಪ್ರಕ್ರಿಯೆಗಳು
19	2	ನಮ್ಮ ಪರಿಸರದ ಅಧ್ಯಯನ	ಜಲಾನಯನಗಳು	water body	ನೀರುದಾಣಗಳು
20	2	ನಮ್ಮ ಪರಿಸರದ ಅಧ್ಯಯನ	ಶೈವಲ	algae	ಪಾಚಿ
21	2	ನಮ್ಮ ಪರಿಸರದ ಅಧ್ಯಯನ	ಅಂತಃಕ್ರಿಯೆ	interaction	ಒಡನಾಟ
22	2	ನಮ್ಮ ಪರಿಸರದ ಅಧ್ಯಯನ	ಮತ್ಸ್ಯಾಗಾರ	aquarium	ಮೀನುಮನೆ
23	2	ನಮ್ಮ ಪರಿಸರದ ಅಧ್ಯಯನ	ಸೌರಮಂಡಲ	solar system	ಸೂರ್ಯನ ಮಂಡಲ
24	2	ನಮ್ಮ ಪರಿಸರದ ಅಧ್ಯಯನ	ಬಹುಕೋಶೀಯ ಜೀವಿಗಳು	multicellular organisms	ಹಲವುಕೋಶದ ಜೀವಿಗಳು
25	2	ನಮ್ಮ ಪರಿಸರದ ಅಧ್ಯಯನ	ಜಲಾವರಣ	hydrosphere	ನೀರಿನ ಆವರಣ, ನೀರುಗೋಳ
26	2	ನಮ್ಮ ಪರಿಸರದ ಅಧ್ಯಯನ	ತಾಪ	heat	ಕಾವು
27	2	ನಮ್ಮ ಪರಿಸರದ ಅಧ್ಯಯನ	ಉಷ್ಣ	heat	ಉಷ್ಣ, ಕಾವು
28	2	ನಮ್ಮ ಪರಿಸರದ ಅಧ್ಯಯನ	ಆವಾಸಸ್ಥಾನ	habitat	ನೆಲೆ
29	2	ನಮ್ಮ ಪರಿಸರದ ಅಧ್ಯಯನ	ಘನರೂಪ	solid state	ಗಟ್ಟಿರೂಪ

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
30	2	ನಮ್ಮ ಪರಿಸರದ ಅಧ್ಯಯನ	ಚಲನಶೀಲ	dynamic	ಚುರುಕಾದ, ಚಟುವಟಿಕೆಯುಳ್ಳ
31	2	ನಮ್ಮ ಪರಿಸರದ ಅಧ್ಯಯನ	ಫಲ	fruit	ಹಣ್ಣು
32	2	ನಮ್ಮ ಪರಿಸರದ ಅಧ್ಯಯನ	ವಿಘಟನೆ	break down	ಒಡೆಯುವಿಕೆ, ಒಡೆತ, ಕೊಳೆತ
33	2	ನಮ್ಮ ಪರಿಸರದ ಅಧ್ಯಯನ	ನೈಸರ್ಗಿಕ ವ್ಯವಸ್ಥೆ	natural system	ನಿಸರ್ಗದ ವ್ಯವಸ್ಥೆ
34	2	ನಮ್ಮ ಪರಿಸರದ ಅಧ್ಯಯನ	ಶ್ರೇಣೀಕೃತ	hierarchy	ಹಂತ, ಮಟ್ಟ
35	2	ನಮ್ಮ ಪರಿಸರದ ಅಧ್ಯಯನ	ಪ್ರಭೇದಗಳು	species	ಪಂಗಡಗಳು
36	2	ನಮ್ಮ ಪರಿಸರದ ಅಧ್ಯಯನ	ಜಲ ಪರಿಸರವ್ಯವಸ್ಥೆಗಳು	aquatic ecosystems	ನೀರು ಪರಿಸರವ್ಯವಸ್ಥೆಗಳು
37	2	ನಮ್ಮ ಪರಿಸರದ ಅಧ್ಯಯನ	ಅಜೈವಿಕ ಘಟಕಗಳು	abiotic components	ಜೀವವಿಲ್ಲದ ಬಿಡಿಗಳು
38	3	ನಮ್ಮ ಪರಿಸರದ ಅಧ್ಯಯನ	ಸಾವಯವ	organic	ಜೀವಿಗಳ
39	2	ನಮ್ಮ ಪರಿಸರದ ಅಧ್ಯಯನ	ನಿರವಯವ	inorganic	ಜೀವಿಗಳಲ್ಲದ
40	2	ನಮ್ಮ ಪರಿಸರದ ಅಧ್ಯಯನ	ಆರ್ದ್ರತೆ	humidity	ತೇವಾಂಶ
41	2	ನಮ್ಮ ಪರಿಸರದ ಅಧ್ಯಯನ	ಶಿಲೀಂಧ್ರ	fungi	ಅಣಬೆ
42	2	ನಮ್ಮ ಪರಿಸರದ ಅಧ್ಯಯನ	ಪ್ರಾಥಮಿಕ ಭಕ್ಷಕರು	primary consumers	ಮೊದಲ ಹಂತದ ತಿನಿಗಳು
43	2	ನಮ್ಮ ಪರಿಸರದ ಅಧ್ಯಯನ	ಕೀಟಲಾರ್ವಾಗಳು	larva	ಮರಿಹುಳುಗಳು
44	2	ನಮ್ಮ ಪರಿಸರದ ಅಧ್ಯಯನ	ಜಲಪಕ್ಷಿಗಳು	water birds	ನೀರು ಹಕ್ಕಿಗಳು

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
45	2	ನಮ್ಮ ಪರಿಸರದ ಅಧ್ಯಯನ	ಪೋಷಣಾಸ್ತರ	trophic level	ಪೋಷಣೆಯ ಮಟ್ಟ, ಪೋಷಣೆಯ ಹಂತ
46	2	ನಮ್ಮ ಪರಿಸರದ ಅಧ್ಯಯನ	ಭಕ್ಷಕ ಆಹಾರ ಸರಪಳಿ	predatory food chain	ತಿನ್ನುಕಗಳ / ತಿನಿಗಳ ಆಹಾರ ಸರಪಳಿ
47	2	ನಮ್ಮ ಪರಿಸರದ ಅಧ್ಯಯನ	ಕಶಾಂಗಯುಕ್ತ (ಆದಿಜೀವಿಗಳು)	flagellate	ಬಳ್ಳಿಗಾಲಿರುವ
48	2	ನಮ್ಮ ಪರಿಸರದ ಅಧ್ಯಯನ	ಚತುರ್ಥಕ ಭಕ್ಷಕ	quaternary consumer	ನಾಲ್ಕನೇ ಹಂತದ ತಿನಿ
49	2	ನಮ್ಮ ಪರಿಸರದ ಅಧ್ಯಯನ	ಶಕ್ತಿಯ ಸಂಚಾರ	flow of energy	ಶಕ್ತಿಯ ಹರಿವು
50	2	ನಮ್ಮ ಪರಿಸರದ ಅಧ್ಯಯನ	ಜೈವಿಕ ತೂಕ	biomass	ಜೀವ ತೂಕ
51	2	ನಮ್ಮ ಪರಿಸರದ ಅಧ್ಯಯನ	ಉಷ್ಣಗತಿ ನಿಯಮ	thermodynamics	ಕಾವುಮಾರ್ಪಾಟಿನ ವಿಜ್ಞಾನ / ಕಾವು ಹರಿವಿನ ವಿಜ್ಞಾನ
52	2	ನಮ್ಮ ಪರಿಸರದ ಅಧ್ಯಯನ	ಜೈವಿಕ ಸಂವರ್ಧನೆ	bio magnification	ಜೀವಹೆಚ್ಚಳ
53	3	ಪರಮಾಣುವಿನ ರಚನೆ	ಆಧಾರ ಭಾವನೆಗಳು	postulates	ಅಡಿಪಾಯಗಳು
54	3	ಪರಮಾಣುವಿನ ರಚನೆ	ಸಿದ್ಧಾಂತ	theory	ಸಿದ್ಧಾಂತ, ಅಡಿಕಟ್ಟಲೆ, ಅಡಿನಿಯಮ
55	3	ಪರಮಾಣುವಿನ ರಚನೆ	ವಿಸರ್ಜನಾ ನಳಿಕೆ	discharge tube	ಹರಿಬಿಡುವ ಕೊಳವೆ
56	3	ಪರಮಾಣುವಿನ ರಚನೆ	ಧನಾಗ್ರ	anode	ಕೂಡತುದಿ
57	3	ಪರಮಾಣುವಿನ ರಚನೆ	ಋಣಾಗ್ರ	cathode	ಕಳೆತುದಿ
58	3	ಪರಮಾಣುವಿನ ರಚನೆ	ಋಣಾಗ್ರ ಕಿರಣಗಳು	cathode rays	ಕಳೆತುದಿಯ ಕಿರಣಗಳು
59	3	ಪರಮಾಣುವಿನ ರಚನೆ	ಆನೋಡ್	anode	ಕೂಡತುದಿ
60	3	ಪರಮಾಣುವಿನ ರಚನೆ	ಕ್ಯಾತೋದ್	cathode	ಕಳೆತುದಿ
61	3	ಪರಮಾಣುವಿನ ರಚನೆ	ಆವಿಷ್ಕಾರ	discovery	ಕಂಡುಹಿಡಿತ, ಕಂಡುಹಿಡಿಯುವಿಕೆ
62	3	ಪರಮಾಣುವಿನ ರಚನೆ	ಅಸಿಂಧು	had to be given up	ಕೈಬಿಡಬೇಕಾಯಿತು
63	3	ಪರಮಾಣುವಿನ ರಚನೆ	ವಿದ್ಯುದಾವಿಷ್ಟ	charged	ಹುರುಪು, ಹುರುಪಿನ
64	3	ಪರಮಾಣುವಿನ ರಚನೆ	ಧನಾವೇಶಕಣ	positively charged particle	ಧನ ಹುರುಪಿನ ಕಣ
65	3	ಪರಮಾಣುವಿನ ರಚನೆ	ವಿಚಲನೆ	deflection	ವಾಲುವಿಕೆ

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
66	3	ಪರಮಾಣುವಿನ ರಚನೆ	ಬೀಜಕೇಂದ್ರ	nucleus	ನಡುವಣ
67	3	ಪರಮಾಣುವಿನ ರಚನೆ	ಕೆಂದ್ರೀಕೃತ	concentrated	ಕೂಡಿಕೊಂಡಿದೆ
68	3	ಪರಮಾಣುವಿನ ರಚನೆ	ತಟಸ್ಥ ಕಣಗಳು	neutral particle	ಹುರುಪಿಲ್ಲದ ಕಣಗಳು, ನೆಲೆತ ಕಣಗಳು
69	3	ಪರಮಾಣುವಿನ ರಚನೆ	ಕಕ್ಷೆಗಳು	orbit	ಸುತ್ತುಹಾದಿ, ಬಳಸುಹಾದಿ
70	3	ಪರಮಾಣುವಿನ ರಚನೆ	ವಿಕರ್ಷಣ ಬಲ	force of repulsion	ಹಿಂದಟ್ಟುವ ಬಲ, ತಳ್ಳುವ ಬಲ
71	4	ಪರಮಾಣುವಿನ ಬಗ್ಗೆ ಇನ್ನಷ್ಟು	ಸಾಪೇಕ್ಷ ಪರಮಾಣು ರಾಶಿ	relative atomic mass	ಹೋಲಿಕೆಯ ಪರಮಾಣು ರಾಶಿ
72	4	ಪರಮಾಣುವಿನ ಬಗ್ಗೆ ಇನ್ನಷ್ಟು	ಧಾತುವಿನ ವೇಲೆನ್ಸಿ	valency of an element	ಧಾತುವಿನ ಸೇರುವಳವು, ಧಾತುವಿನ ಸೇರುಸಾಮರ್ಥ್ಯ,
73	4	ಪರಮಾಣುವಿನ ಬಗ್ಗೆ ಇನ್ನಷ್ಟು	ಪರಮಾಣು ರಾಶಿಯ ಮಾನ	atomic mass unit	ಪರಮಾಣು ರಾಶಿಯ ಅಳತೆ, ಪರಮಾಣು ರಾಶಿಯ ಬಿಡಿ
74	4	ಪರಮಾಣುವಿನ ಬಗ್ಗೆ ಇನ್ನಷ್ಟು	ಸಾಪೇಕ್ಷ ಅಣುರಾಶಿ	relative molecular mass	ಹೋಲಿಕೆಯ ಅಣು ರಾಶಿ
75	4	ಪರಮಾಣುವಿನ ಬಗ್ಗೆ ಇನ್ನಷ್ಟು	ಶಾಖ	temperature	ಬಿಸಿ, ಬಿಸುಪು, ಕಾವಳತೆ
76	5	ಜೀವಕೋಶಗಳ ಅಧ್ಯಯನ	ಜೀವಕೋಶ	cell	ಕೋಶ
77	5	ಜೀವಕೋಶಗಳ ಅಧ್ಯಯನ	ವಿಸರಣೆ	diffusion	ಹರಡುವಿಕೆ
78	5	ಜೀವಕೋಶಗಳ ಅಧ್ಯಯನ	ಅಭಿಸರಣೆ	osmosis	ಪರೆತೂರುವಿಕೆ
79	5	ಜೀವಕೋಶಗಳ ಅಧ್ಯಯನ	ಏಕಕೋಶೀಯ	unicellular	ಒಂದು ಕೋಶದ
80	5	ಜೀವಕೋಶಗಳ ಅಧ್ಯಯನ	ಬಹುಕೋಶೀಯ	multicellular	ಹಲವು ಕೋಶದ
81	5	ಜೀವಕೋಶಗಳ ಅಧ್ಯಯನ	ರಚನಾತ್ಮಕ ಮತ್ತು ಕಾರ್ಯಾತ್ಮಕ ಮೂಲ ಘಟಕಗಳು	structural and functional units	ರಚನೆಯ ಮತ್ತು ಕಾರ್ಯ ನೆರವೇರಿಸುವ ಮೂಲ ಬಿಡಿಗಳು
82	5	ಜೀವಕೋಶಗಳ ಅಧ್ಯಯನ	ರಕ್ತಪರಿಚಲನಾಂಗವ್ಯೂಹ	circulatory system	ಹರಿಯುವಿಕೆಯ ಏರ್ಪಾಡು

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
83	5	ಜೀವಕೋಶಗಳ ಅಧ್ಯಯನ	ನೇತ್ರ ಮಸೂರ	eyepiece lens	ಕಣ್ಬದಿಯ ಮಸೂರ, ಗಾಜು, ಕಣ್ಗಾಜು
84	5	ಜೀವಕೋಶಗಳ ಅಧ್ಯಯನ	ಸೂಕ್ಷ್ಮದರ್ಶಕ	microscope	ಸೂಕ್ಷ್ಮತೋರುಕ, ಕಿರುದೋರುಕ
85	5	ಜೀವಕೋಶಗಳ ಅಧ್ಯಯನ	ವರ್ಧನಾ ಸಾಮರ್ಥ್ಯ	magnification power	ಹೆಚ್ಚಿಸುವ ಸಾಮಾರ್ಥ್ಯ
86	5	ಜೀವಕೋಶಗಳ ಅಧ್ಯಯನ	ಕೋಶಕೇಂದ್ರ	nucleus	ನಡುವಣ
87	5	ಜೀವಕೋಶಗಳ ಅಧ್ಯಯನ	ಕಿರುಕೋಶಕೇಂದ್ರ	nucleolus	ಕಿರುನಡುವಣ
88	5	ಜೀವಕೋಶಗಳ ಅಧ್ಯಯನ	ವಿಸರಣೆ	diffusion	ಹರಡುವಿಕೆ
89	5	ಜೀವಕೋಶಗಳ ಅಧ್ಯಯನ	ಸಾರತೆ	concentration	ಗಟ್ಟಿತನ?
90	5	ಜೀವಕೋಶಗಳ ಅಧ್ಯಯನ	ಅಭಿಸರಣೆ	osmosis	ಪರೆತೂರುವಿಕೆ
91	5	ಜೀವಕೋಶಗಳ ಅಧ್ಯಯನ	ರಾಳ	resin	ಅಂಟು
92	5	ಜೀವಕೋಶಗಳ ಅಧ್ಯಯನ	ಜೈವಿಕ ಭಾಗಳು	living components	ಜೀವವಿರುವ ಭಾಗಗಳು
93	5	ಜೀವಕೋಶಗಳ ಅಧ್ಯಯನ	ಪೊರೆಸಹಿತ ಕಣದಂಗಗಳು	membranous organelles	ಪೊರೆಯಿರುವ ಕಣದಂಗಗಳು
94	5	ಜೀವಕೋಶಗಳ ಅಧ್ಯಯನ	ಪೊರೆರಹಿತ ಕಣದಂಗಗಳು	non-membranous organelles	ಪೊರೆಯಿರದ ಕಣದಂಗಗಳು
95	5	ಜೀವಕೋಶಗಳ ಅಧ್ಯಯನ	ಜಲವಿಭಜಕ	hydrolytic	ನೀರೊಡೆಯುವ
96	5	ಜೀವಕೋಶಗಳ ಅಧ್ಯಯನ	ಆತ್ಮಹತ್ಯಾ ಸಂಚಿಗಳು	suicide bags	ಕೊಂದುಕೊಳ್ಳುವ ಚೀಲಗಳು, ಆತ್ಮಹತ್ಯೆಯ ಚೀಲಗಳು
97	5	ಜೀವಕೋಶಗಳ ಅಧ್ಯಯನ	ವರ್ಣಕ (ಹಸಿರು ವರ್ಣಕ)	pigment	ಬಣ್ಣಕ

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
98	5	ಜೀವಕೋಶಗಳ ಅಧ್ಯಯನ	ಹರಿತ್ತು	chlorophyll	ಎಲೆಹಸಿರು
99	5	ಜೀವಕೋಶಗಳ ಅಧ್ಯಯನ	ಕೋಶಕೇಂದ್ರ ಪೊರೆ	nuclear membrane	ನಡುವಣದ ಪೊರೆ
100	5	ಜೀವಕೋಶಗಳ ಅಧ್ಯಯನ	ಕೋಶಕೇಂದ್ರ ದ್ರವ್ಯ	nucleoplasm	ನಡುವಣದ ದ್ರವ್ಯ
101	5	ಜೀವಕೋಶಗಳ ಅಧ್ಯಯನ	ವರ್ಣತಂತು	chromosome	ಬಣ್ಣತಂತು
102	5	ಜೀವಕೋಶಗಳ ಅಧ್ಯಯನ	ಕೋಶಭಿತ್ತಿ	cell wall	ಕೋಶದ ಗೋಡೆ
103	6	ಜೀವಿಗಳ ವರ್ಗೀಕರಣ	ತ್ಯಾಜ್ಯವಸ್ತು	waste	ಕಸ
104	6	ಜೀವಿಗಳ ವರ್ಗೀಕರಣ	ನೈಸರ್ಗಿಕ ಸಂಪನ್ಮೂಲಗಳು	natural resources	ನಿಸರ್ಗದ ಸಂಪನ್ಮೂಲಗಳು
105	6	ಜೀವಿಗಳ ವರ್ಗೀಕರಣ	ಜೈವಿಕ ತಂತ್ರಜ್ಞಾನ	biotechnology	ಜೀವಿಗಳ ತಂತ್ರಜ್ಞಾನ
106	6	ಜೀವಿಗಳ ವರ್ಗೀಕರಣ	ವರ್ಗೀಕರಣ	classification	ಗುಂಪಿಸುವಿಕೆ
107	6	ಜೀವಿಗಳ ವರ್ಗೀಕರಣ	ವರ್ಗೀಕರಣ ಶಾಸ್ತ್ರ	taxonomy	ಗುಂಪಿಸುವಿಕೆಯ ಶಾಸ್ತ್ರ
108	6	ಜೀವಿಗಳ ವರ್ಗೀಕರಣ	ದ್ವಿನಾಮನಾಮಕರಣ	binomial nomenclature	ಎರಡು ಹೆಸರುಗಳ ಪದ್ಧತಿ
109	6	ಜೀವಿಗಳ ವರ್ಗೀಕರಣ	ಮಜಲು	level	ಮಟ್ಟ, ಹಂತ

10 ನೆಯ ತರಗತಿ (ಮೊದಲ ಅರ್ಧ) - ವಿಜ್ಞಾನ ಪಠ್ಯಪುಸ್ತಕ 2014-15

ಕ್ರ. ಸಂ	ಪಾಠದ ಸಂಖ್ಯೆ	ಪಾಠದ ಹೆಸರು	ಪಾಠಗಳಲ್ಲಿ ಬಳಸಿರುವ ಪದಗಳು	ಇಂಗ್ಲೀಷ್ ಪದಗಳು	ಬಳಸಬಹುದಾದ ಸಾಟಿ ಪದಗಳು
1	1	ಶಕ್ತಿಯ ಪರ್ಯಾಯ ಆಕರಗಳು	ಸೌರಶಕ್ತಿ	solar energy	ಸೂರ್ಯನ ಶಕ್ತಿ
2	1	ಶಕ್ತಿಯ ಪರ್ಯಾಯ ಆಕರಗಳು	ಕ್ಷೀಣಿಸು	reduce / decrease	ಕಡಿಮೆಯಾಗು / ಕುಗ್ಗಿಸು
3	1	ಶಕ್ತಿಯ ಪರ್ಯಾಯ ಆಕರಗಳು	ನವೀಕರಿಸಬಹುದಾದ	renewable	ಹೊಸದಾಗಿಸಬಹುದಾದ / ಮರುಪಡೆಯಬಹುದಾದ
4	1	ಶಕ್ತಿಯ ಪರ್ಯಾಯ ಆಕರಗಳು	ಭೂಗರ್ಭ ಉಷ್ಣ	underground heat	ನೆಲದಾಳದ / ನೆಲದಡಿಯ ಕಾವು / ಉಷ್ಣ
5	1	ಶಕ್ತಿಯ ಪರ್ಯಾಯ ಆಕರಗಳು	ತ್ಯಾಜ್ಯ	waste	ಕಸ
6	1	ಶಕ್ತಿಯ ಪರ್ಯಾಯ ಆಕರಗಳು	ನ್ಯೂಕ್ಲಿಯಾರ್	nuclear	ನಡುವಣದ
